ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯೂನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 6 | ಸಂಚಿಕೆ 13 | ಮಾರ್ಚ್ 25, 1984 | ಬೆಲೆ 60 ಪೈಸೆ

ಯುದ್ಧ ತಡೆಗಟ್ಟಲೇ ಬೇಕು

ಅಣು ಯುದ್ಧ ವಿರೋಧಿ ಮತ್ತು ಭಾರತದ ಸಾರ್ವಭೌಮತ್ವದ ರಕ್ಷಣೆಗಾಗಿ ಏಪ್ರಿಲ್ 13 ರಂದು ದೇಶಾದ್ಯಂತ ಸಭೆ, ಮಕ ಪ್ರದರ್ಶನ ನಡೆಸಬೇಕೆಂದು ಮಾರ್ಚ್ ತಿಂಗಳು ದಿಲ್ಲಿಯಲ್ಲಿ ಸೇರಿದ 8 ವಿರೋಧ ಪಕ್ಷಗಳ ಸಮಾವೇಶ ಕರೆ ನೀಡಿರುವುದನ್ನು ಸಂಪೂರ್ಣ ಯಶಸ್ವಿಗೊಳಿಸಬೇಕೆಂದು ಸಿ. ಪಿ. ಐ. (ಎಂ) ಪಾಲಿಟ್ ಬ್ಯೂರೋ ಪಕ್ಷದ ಎಲ್ಲ ಘಟಕಗಳಿಗೆ ಕರೆ ನೀಡಿದೆ. ಜನತಾ ಮತ್ತು ಇತರ ಪಕ್ಷಗಳನ್ನು ಶಾಂತಿ ಹಾಗೂ ದೇಶದ ಭದ್ರತೆಯ ರಕ್ಷಣೆಗಾಗಿಯೂ ಸಾಮ್ರಾಜ್ಯಶಾಹಿ ಧಾಳಿಯ ವಿರುದ್ಧ ಹೋರಾಡುತ್ತಿರುವ ಜನತೆಗೂ ಬೆಂಬಲ ಸೂಚಿಸಲು ನಡೆಯುವ ಈ ಚಳುವಳಿಯಲ್ಲಿ ಪಾಲ್ಗೊಳ್ಳುವಂತೆ ಮಾಡಬೇಕೆಂದೂ ಸೂಚಿಸಿದೆ.

ರಾಜ್ಯ ಸಭೆ ಚುನಾವಣೆಯ ಮಹತ್ವ

ಮಾರ್ಚ್ 29 ರಂದು ರಾಜ್ಯ ಸಭೆ ಚುನಾವಣೆ ನಡೆಯುತ್ತದೆ. ರಾಜಕೀಯ ದೃಷ್ಟಿಯಿಂದ ಇದಕ್ಕೆ ಬಹಳ ಮಹತ್ವವಿದೆ.

ಈ ಚುನಾವಣೆಯ ಮೂಲಕ ರಾಜ್ಯ ಸಭೆಯಲ್ಲಿ ಎರಡು ಮೂರಾಂಶ ಬಹುಮತ ಪಡೆಯಬೇಕೆಂಬ ಮಹೋದ್ದೇಶ ಹೊಂದಿದವರಾಗಿದ್ದಾರೆ ಇಂದಿರಾ ಗಾಂಧಿ. 1980 ಲೋಕಸಭೆ ಚುನಾವಣೆಯಲ್ಲಿ ತಮ್ಮ ಅಪೇಕ್ಷೆಗೆ ಮೀರಿ 2/3 ಅಂಶ ಬಹುಮತ ಪಡೆದಿದ್ದರು. ದೇಶದಲ್ಲಿ ರಾಷ್ಟ್ರಾಧ್ಯಕ್ಷ ಪದ್ಧತಿಯ ಆಡಳಿತ ತರಬೇಕೆಂಬ ತಮ್ಮ ಮಹದಾಸೆಗೆ ರಾಜ್ಯ ಸಭೆಯಲ್ಲಿ ತನಗೆ 2/3 ಅಂಶ ಬಹುಮತ ಇಲ್ಲದಿರುವುದು ತೊಂದರೆಯಾಗಿದೆ; ಸಂವಿಧಾನದ ತಿದ್ದುಪಡಿಯಾಗಬೇಕಾದರೆ ಲೋಕ ಸಭೆ ರಾಜ್ಯ ಸಭೆಗಳೆರಡರಲ್ಲೂ 2/3 ನೇ ಬಹುಮತ ಅತ್ಯಗತ್ಯ. ಆ ದಿಸೆಯಲ್ಲಿ ಇಂದಿರಾ ಅವರ ಸರ್ವಪ್ರಯತ್ನ ನಡೆದಿದೆ. ಸದ್ಯ 244 ಸದಸ್ಯರಿರುವ ರಾಜ್ಯ ಸಭೆಯಲ್ಲಿ ಕಾಂಗ್ರೆಸ್ ಸಂಖ್ಯೆ 132. ಈ ಸಂಖ್ಯೆ 152 ರಷ್ಟಾಗಬಹುದೆಂಬ ಊಹೆ. 2/3 ರ ಬಹುಮತಕ್ಕೆ 11 ಮತ ಕಡಿಮೆಯಾಗುತ್ತದೆ. 8 ಸದಸ್ಯರಿರುವ ಎ.ಐ.ಡಿ.ಎಂ.ಕೆ. ಮತ ನೀಡಿದರೂ ಕೂಡ ಅವರ ಆಸೆ ಪೂರೈಸುವುದಿಲ್ಲ.

ಇಂದಿರಾ ಕಾಂಗ್ರೆಸ್ಸಿನ ದುರುದ್ದೇಶ ಈ ರೀತಿ ಪ್ರಕಟವಾಗುತ್ತಿರುವಾಗ ದೇಶದ ರಾಜಕೀಯ ರಂಗದಲ್ಲಿ ಬೆಳೆದು ಬರುತ್ತಿರುವ, ಎದ್ದು ಕಾಣುತ್ತಿರುವ ಮತ್ತೊಂದು ಮಹತ್ವವಾದ ರಾಜಕೀಯ ಘಟನೆಯ ಕುರಿತು ಜನರ ಗಮನ ಹರಿಸುವುದು ಅತ್ಯಗತ್ಯ. ಅದೇನೆಂದರೆ ಮಾರ್ಚ್ 29 ರ ಚುನಾವಣೆಯ ನಂತರ ರಾಜ್ಯಸಭೆಯಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ 16 ಸದಸ್ಯರನ್ನೊಳಗೊಂಡ ಅತಿ ದೊಡ್ಡ ವಿರೋಧ ಪಕ್ಷದ ಸ್ಥಾನ ಅಲಂಕರಿಸುತ್ತದೆ. ಈಗ ವಿರೋಧ ಪಕ್ಷದ ಮುಖಂಡನಾಗಿರುವ 21 ಸದಸ್ಯರನ್ನೊಳಗೊಂಡ ಜನತಾ ಪಕ್ಷ 9 ಕ್ಕಿಳಿದು ವಿರೋಧ ಪಕ್ಷದ ಸ್ಥಾನವನ್ನು ಸಿ. ಪಿ. ಐ. (ಎಂ)ಗೆ ಬಿಟ್ಟುಕೊಡಬೇಕಾಗುತ್ತದೆ. ಈ ಚುನಾವಣೆಯಲ್ಲಿ ಸಿ. ಪಿ. ಐ. (ಎಂ) ಮತ್ತು ಎ.ಐ.ಡಿ ಎಂ.ಕೆ. ಬಿಟ್ಟು ಇತರ ಎಲ್ಲ ವಿರೋಧ ಪಕ್ಷಗಳೂ ತಮ್ಮ ಸದಸ್ಯರ ಸಂಖ್ಯೆಯಲ್ಲಿ ಕಡಿತವನ್ನೆದುರಿಸಬೇಕಾಗುತ್ತದೆ. ಇದಕ್ಕೆ ಕಾರಣ ವೇನು ?

ಕಾಂಗ್ರೆಸ್ಸಿಗೆ ಪರ್ಯಾಯ ಪಕ್ಷ ತಾನೇ ಎಂದು ಭಾರತೀಯ ಜನತಾ ಪಾರ್ಟಿ ಹೇಳುತ್ತ ಬಂದಿದೆ, ಬಿ.ಜೆ.ಪಿ. ಲೋಕದಳ ಸೇರಿ ಪರ್ಯಾಯವಾಗುತ್ತದೆಂದೂ ಹೇಳಲಾಗುತ್ತಿದೆ. ಇತ್ತೀಚೆಗೆ ಜನತಾ ಪಕ್ಷ ಕೂಡ ತಾನೇ ಪರ್ಯಾಯ ಪಕ್ಷವಾಗಿದ್ದೇನೆಂದೂ ಘೋಷಿಸಿದೆ. ಕಮ್ಯೂನಿಸ್ಟೇತರರನ್ನೆಲ್ಲ ಸೇರಿಸಿ, ಪರ್ಯಾಯ ಪಕ್ಷ ಕಟ್ಟಬೇಕೆಂಬಾಶಯವನ್ನು ಹೀಯ ಮುಖಂಡ ನಿಜಲಿಂಗಪ್ಪನವರು ವ್ಯಕ್ತ ಮಾಡಿದ್ದಾರೆ. ಆದರೆ ಇವರ ಆಶಯಗಳೆಲ್ಲ ನಿರುಪಾಲಾಗಿವೆ. ಅದರಂತೆಯೇ ರಾಷ್ಟ್ರೀಯ ಪ್ರಜಾಪ್ರಭುತ್ವ ರಂಗ ರಚಿಸಿ ತಮ್ಮ ಗುರಿ ಸಾಧಿಸಬೇಕೆಂಬ ಭಾರತ ಕಮ್ಯೂನಿಸ್ಟ್ ಪಾರ್ಟಿ ಕೂಡ ತನ್ನ ನಿಲುವಿನಲ್ಲಿ ಬದಲಾವಣೆ ಮಾಡಬೇಕಾದಂಥ ಪರಿಸ್ಥಿತಿ ಉಂಟಾಗಿದೆ. ಆದರೆ ಈ ಎಲ್ಲ ವಿರೋಧ ಪಕ್ಷಗಳ ಗುರಿ ಸಾಧನೆಯಲ್ಲಿ ಮುಂದುವರಿಕೆ ಕುಂಠಿತಗೊಳ್ಳುತ್ತಿರುವಾಗ, ತಮ್ಮ ನೀತಿಯಲ್ಲಿ ಮೇಲಿಂದ ಮೇಲೆ ಬದಲಾವಣೆಗಳನ್ನು ರೂಪಿಸಿಕೊಳ್ಳುವಂಥ ಪರಿಸ್ಥಿತಿ ಉಂಟಾಗುತ್ತಿರುವಾಗ, ತಾವೇ ಕಾಂಗ್ರೆಸ್ಸಿಗೆ ಪರ್ಯಾಯವೆಂದು ಹೇಳುತ್ತಿರುವ ಮಾತು ಫಲಿಸಲಾರದಂತಾಗುತ್ತಿರುವಾಗ, ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಮಾತ್ರ ತನ್ನ ಎಡ ಮತ್ತು ಪ್ರಜಾಪ್ರಭುತ್ವ ರಂಗ ರಚನೆಯ ಕಾರ್ಯದಲ್ಲಿ ಯಶಸ್ಸುಗಳಿಸುತ್ತಾ, ಅದೊಂದೇ ಕಾಂಗ್ರೆಸ್ಸಿಗೆ ವಿರುದ್ಧವಾಗಿ ಬೆಳೆದು ಬರತಕ್ಕ ಪರ್ಯಾಯ ರಂಗ ಎಂಬುದನ್ನು ಸಾಬೀತು ಮಾಡಿಕೊಡುವಲ್ಲಿ ಫಲಕಾರಿಯಾಗಿದೆಂಬುದನ್ನು ಸಾರ್ವಜನಿಕರು ತಿಳಿದುಕೊಳ್ಳುವುದಗತ್ಯ.

ಭಾರತ ಕಮ್ಯೂನಿಸ್ಟ್ ಪಕ್ಷ ಎರಡು ವರ್ಷಗಳ ಹಿಂದಿನ ಕಾಲದವರೆಗೂ ಸೋವಿಯತ್ ದೇಶದ ಪರವಾದ, ನಕ್ಸಲೈಟರು ಚೀನಾ ದೇಶದ ಪರವಾದ ನಿಲುವುಗಳನ್ನು ನಿಷ್ಠೆಯಿಂದ ಪಾಲಿಸುತ್ತ, ಒಬ್ಬರು ಚೀನದ ವಿರುದ್ಧ ಮತ್ತೊಬ್ಬರು ರಶ್ಯಾದ ವಿರುದ್ಧ ಅಪಪ್ರಚಾರ ಮಾಡುತ್ತಿದ್ದಾಗ, ಇವೆರಡೂ ಮಹಾ ಸಮತಾವಾದಿ ದೇಶಗಳೂ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷವನ್ನು ಸಂಪೂರ್ಣ ಕಡೆಗಣಿಸಿದ್ದಾಗಲೂ ಕೂಡ, ಜಗತ್ತಿನಲ್ಲಿ ಸಾಮ್ರಾಜ್ಯಶಾಹಿಯನ್ನು ಸಂಪೂರ್ಣ ನಾಶಮಾಡಿ, ಕಾರ್ಮಿಕ ವರ್ಗದ ಪ್ರಭುತ್ವ ಸ್ಥಾಪನೆಯಾಗಬೇಕಾದರೆ, ರಶ್ಯಾ-ಚೀನಾ ದೇಶಗಳೆರಡೂ ತಮ್ಮ ಭಿನ್ನಾಭಿಪ್ರಾಯಗಳನ್ನು ಸೌಹಾರ್ದತೆಯಿಂದ ಬಗೆಹರಿಸಿಕೊಂಡು, ಜಗತ್ತಿನಲ್ಲಿರುವ ಎಲ್ಲ ಕಮ್ಯೂನಿಸ್ಟ್, ಮತ್ತು ಪ್ರಜಾಪ್ರಭುತ್ವ ಪಕ್ಷ ಮತ್ತು ಶಕ್ತಿಗಳೆಲ್ಲ ಐಕ್ಯತೆ ಸಾಧಿಸುವುದು ಅತ್ಯಗತ್ಯವೆಂದು ಸಿ. ಪಿ. ಐ. (ಎಂ) ಸಾರುತ್ತ ಬಂದಿದೆ. ಪ್ರತಿಪಾದಿಸುತ್ತ ಬಂದಿದೆ. ಅದರ ಪರಿಣಾಮವಾಗಿ ಇತ್ತೀಚೆಗೆ ರಶ್ಯಾ-ಚೀನಾ ಕಮ್ಯೂನಿಸ್ಟ್ ಪಕ್ಷಗಳು ಸಿ. ಪಿ. ಐ. (ಎಂ) ಜೊತೆಯಲ್ಲಿ ಸೌಹಾರ್ದ ಸಂಬಂಧ ಬೆಳೆಸಲು ಮುಂದಾಗಿವೆ. ಕಾನಪುರದಲ್ಲಿ ನಡೆದ ಸಿಐಟಿಯು ಸಮ್ಮೇಳನದಲ್ಲೂ ಹಾಗೆಯೇ ವಿದ್ಯಾರ್ಥಿ ಯುವಜನರ ಸಮಾವೇಶಗಳಲ್ಲೂ ಈ ಎರಡು ದೇಶಗಳ ಪ್ರತಿನಿಧಿಗಳು ಒಂದೇ ವೇದಿಕೆಯಲ್ಲಿ ಅತ್ಯಂತ ಸೌಹಾರ್ದಯುತವಾಗಿ ಪಾಲ್ಗೊಳ್ಳುವಂತೆ ಮಾಡಿರುವುದು ಸಿಪಿಐ(ಎಂ)ನ ಧೋರಣೆಯ ವಿಜಯವೇ ಸರಿ.

ನಮ್ಮ ದೇಶದಲ್ಲಿ ಇಂದಿರಾ ಏಕವ್ಯಕ್ತಿ ಸರ್ವಾಧಿಕಾರದ ವಿರುದ್ಧ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನೂ ವ್ಯಕ್ತಿಗಳನ್ನೂ ಸೇರಿಸಿ ಐಕ್ಯರಂಗ ರಚಿಸಬೇಕೆಂಬ ನಿಲುವಿಗೂ ಜಯ ಸಿಗುತ್ತಿದೆ.

ಕಾರ್ಮಿಕ ರಂಗದಲ್ಲಿ ಬಿ. ಎಂ. ಎಸ್. ಒಳಗೊಂಡು 8 ಕೇಂದ್ರೀಯ ಹಾಗೂ 40 ಅಖಿಲ ಭಾರತ ಮಟ್ಟದ ಫೆಡರೇಶನ್‌ಗಳನ್ನು ಒಂದೆಡೆ ಸೇರಿಸಿ ರಾಷ್ಟ್ರೀಯ ಚಳುವಳಿ ಸಮಿತಿಯನ್ನು ರಚಿಸಿ, ಹಲವಾರು ಸಂಯುಕ್ತ ಹೋರಾಟಗಳನ್ನೂ, 1982 ಜನೇವರಿ 19 ರಂದು ದೇಶಾದ್ಯಂತ ಮುಷ್ಕರವನ್ನೂ ಫಲಕಾರಿಯಾಗಿ ನಡೆಸಲು ಸಾಧ್ಯವಾಗಿದೆ. ಇತ್ತೀಚೆಗೆ ರಾಷ್ಟ್ರೀಯ ಚಳುವಳಿ ಸಮಿತಿಯು (ಎನ್.ಸಿ.ಸಿ.) ಎರಡನೇ ಸಮಾವೇಶ ಸೇರಿಸಿ, ಕಾರ್ಮಿಕ ವರ್ಗ ಎದುರಿಸುತ್ತಿರುವ ಕನಿಷ್ಠ ವೇತನ, ನೌಕರಿಯಿಂದ ತೆಗೆಯುವುದು, ಕಾರ್ಖಾನೆ ಮುಚ್ಚುವುದು ಮುಂತಾದ ಸಮಸ್ಯೆಗಳ ಕುರಿತು ಪ್ರತ್ಯೇಕ ಸಮಾವೇಶ ಚಳುವಳಿ ನಡೆಸಿ ಕಾರ್ಮಿಕ ಸಂಘ, ಕಾರ್ಮಿಕ ವರ್ಗದಲ್ಲಿ ಹೆಚ್ಚಿನ ಐಕ್ಯತೆ ಸಾಧಿಸಿ, ಕೇಂದ್ರ ಸರಕಾರದ ಕಾರ್ಮಿಕ ಸಂಬಂಧ ನೀತಿಯ ವಿರುದ್ಧ ಐಕ್ಯ ಪ್ರತಿಭಟನೆ ವ್ಯಕ್ತ ಮಾಡಲು, ಸರಕಾರ ತನ್ನ ನೀತಿಯಲ್ಲಿ ಸ್ವಲ್ಪ ಬದಲಾವಣೆಯನ್ನು ತೋರಿಸುವಂತೆ ಮಾಡುವಲ್ಲಿ ಯಶಸ್ವಿಯಾಗಿದೆ.

ಎಡ ಮತ್ತು ಪ್ರಜಾಪ್ರಭುತ್ವ ರಂಗವನ್ನು ಬಲಪಡಿಸಬೇಕೆಂಬ ಉದ್ದೇಶವನ್ನಿಟ್ಟುಕೊಂಡು ಸತತವಾಗಿ ಆ ದಿಸೆಯಲ್ಲಿ ತನ್ನ ಪ್ರಯತ್ನವನ್ನು ಮುಂದುರಿಸುತ್ತಾ ಕಾಂಗ್ರೆಸ್ ವಿರೋಧ ಪಕ್ಷಗಳ ಮುಖ್ಯ ಮಂತ್ರಿಗಳನ್ನೂ, ಇತರ ಪ್ರಜಾಪ್ರಭುತ್ವ ಪಕ್ಷ, ಗುಂಪುಗಳನ್ನೂ ಒಂದೆಡೆ ಸೇರಿಸುವುದರಲ್ಲಿಯೂ ಸಿಪಿಐ(ಎಂ) ಯಶಸ್ವಿಯಾಗಿದೆ. ಇಂಥ ಸಭೆ ಹೈದರಾಬಾದ, ಕಾಶ್ಮೀರ ಮತ್ತು ಕಲ್ಕತ್ತಾಗಳಲ್ಲಿ ಸೇರಿತ್ತು. ಕಾಂಗ್ರೆಸ್ ಸರಕಾರದ ಆರ್ಥಿಕ ನೀತಿಯ ವಿರುದ್ಧ ಒಮ್ಮತದ ನಿರ್ಣಯ ಹಾಗೂ ಕಾರ್ಯಕ್ರಮ ಹಾಕಿಕೊಳ್ಳುವುದರಲ್ಲಿ ಆ ಕಾರ್ಯಕ್ರಮದಂತೆ ಫೆಬ್ರವರಿ 13 ರಂದು ದೇಶಾದ್ಯಂತ ಬೇಡಿಕೆ ದಿನಾಚರಣೆಯನ್ನೂ, ಮಾರ್ಚ್ ತಿಂಗಳಲ್ಲಿ ಎಲ್ಲ ರಾಜ್ಯಗಳಲ್ಲಿ ಸಮಾವೇಶಗಳನ್ನೂ ಹಾಗೆಯೇ ಏಪ್ರಿಲ್ 17 ರಂದು ದಿಲ್ಲಿಯಲ್ಲಿ ರಾಜಕೀಯ ಸಮಾವೇಶವನ್ನೂ ಸಂಘಟಿಸಿ ಇಂದಿರಾ ಕಾಂಗ್ರೆಸ್ಸಿನ ಜನ ವಿರೋಧಿ ಭ್ರಷ್ಟ ಆಡಳಿತೆಯ ವಿರುದ್ಧ ಜನಾಭಿಪ್ರಾಯ ಉಂಟು ಮಾಡುವಲ್ಲಿ ಯಶಸ್ವಿಯಾಗಿದೆ.

ಯುದ್ಧ ವಿರೋಧಿ, ಶಾಂತಿ ಚಳುವಳಿ ಇಷ್ಟು ದಿನದ ಕೆಲವೇ ಜನರ ಸೊತ್ತಾಗಿ ಉಳಿದು, ಅಮೇರಿಕನ್ ಸಾಮ್ರಾಜ್ಯಶಾಹಿಯ ಯುದ್ಧ ಕೋರ ನೀತಿಯಿಂದ ಮಾನವ ಜನಾಂಗಕ್ಕಾಗುವ ಅಪಾರ ಹಾನಿಯ ಕುರಿತಾಗಲೀ, ಶಾಂತಿ ಚಳುವಳಿಯ ಮಹತ್ವವನ್ನಾಗಲೀ ಜನಕೋಟಿಗೆ ಪರಿಚಯ ಮಾಡಿಸಿ, ಅವರಲ್ಲಿ ಜಾಗೃತಿಯನ್ನುಂಟು ಮಾಡಿ ಯುದ್ಧದ ವಿರುದ್ಧ ಪ್ರಚಂಡ ಜನಾಭಿಪ್ರಾಯ ಉಂಟು ಮಾಡುವಲ್ಲಿ ವಿಫಲರಾಗಿದ್ದರು. ಸಿಪಿಐ(ಎಂ) ಪ್ರಯತ್ನದಿಂದಾಗಿ ಒಂಭತ್ತು ಎಡ-ಮತ್ತು ಪ್ರಜಾಪ್ರಭುತ್ವ ಪಕ್ಷಗಳ ನೇತೃತ್ವದಲ್ಲಿ ಇತ್ತೀಚೆಗೆ ದಿಲ್ಲಿಯಲ್ಲಿ ಶಾಂತಿ ಸಮಾವೇಶ ಸೇರಿಸಲು ಅಮೇರಿಕದ ಸಾಮ್ರಾಜ್ಯಶಾಹಿಯೇ ಯುದ್ಧಕ್ಕೆ ಮೂಲ ಕಾರಣವೆಂದು ತೋರಿಸಿಕೊಡಲು ಶಕ್ಯವಾಗಿದೆ.

ಸಂಯುಕ್ತ ಚಳುವಳಿ, ಹೋರಾಟ, ಸಮಾವೇಶಗಳ ಮೂಲಕ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನೆಲ್ಲ ಒಂದೇ ರಂಗದಡಿಯಲ್ಲಿ ದೃಢೀಕರಣಗೊಳಿಸುವ ಈ ಮಹಾ ಕಾರ್ಯದಲ್ಲಿಯ ಪ್ರಭಾವಿಕ ಮುಖಂಡತ್ವ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿಗೆ ಸೇರುತ್ತದೆ. ಈ ರಂಗವೇ ಇಂದಿರಾ ಕಾಂಗ್ರೆಸ್ಸಿಗೆ ಪರ್ಯಾಯ ಪಕ್ಷವಾಗಿದೆಂದು ಸಿಪಿಐ[ಎಂ] ಹೇಳುತ್ತ ಬಂದಿದೆಯಷ್ಟೇ ಅಲ್ಲ. ಆ ದಿಸೆಯಲ್ಲಿ ಕೆಲಸ ಮಾಡಿ ಕಾರ್ಯ ಸಾಧನೆ ಮಾಡಿದೆ. ಆದಕಾರಣದಿಂದಲೇ ನಾವೇ ಪರ್ಯಾಯ ಪಕ್ಷಗಳೆಂದು ಇತರ ಪಕ್ಷಗಳು ಘೋಷಿಸುತ್ತಿದ್ದರೂ ಕೂಡ, ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಮಾತ್ರ ಅಂಥ ಘೋಷಣೆಯನ್ನು ಕಾರ್ಯರೂಪದಲ್ಲಿ ಸಾಧಿಸುವಲ್ಲಿ ಯಶಸ್ವಿಯಾಗುತ್ತಿದೆಂಬುದನ್ನು ಕಾಣಬಹುದು. ಈ ಕಾರಣದಿಂದಲೇ ರಾಜ್ಯ ಸಭೆಯಲ್ಲಿ ಸಿಪಿಐ(ಎಂ) ವಿರೋಧ ಪಕ್ಷದ ಸ್ಥಾನ ಗಳಿಸಲು ಸಾಧ್ಯವಾಗಿದೆ. ಆ ಸ್ಥಾನವನ್ನು ಸಿಪಿಐ(ಎಂ) ಉಳಿಸಿ ಕೊಳ್ಳುತ್ತದೆ. ಸಿಪಿಐ (ಎಂ) ಅನುಸರಿಸುತ್ತಿರುವ ಸರಿಯಾದ ರಾಜಕೀಯ ನಿಲುವೆಯೇ ಇದಕ್ಕೆ ಕಾರಣವಾಗಿದೆ.

—ಎನ್ಸೆ

ಭಾರತ ದರ್ಶನ

ಗಮನಿಸತಕ್ಕ ಎರಡು ಸಮಾವೇಶಗಳು

ಜನರ ಗಮನ ಸೆಳೆಯುವ 2 ಸಮಾವೇಶಗಳು ಈ ತಿಂಗಳ ಎರಡನೇ ವಾರದಲ್ಲಿ ನಡೆದವು. ಜನತಾ ಪಾರ್ಟಿಯ ಸಮಾವೇಶ ಪಾಟ್ನದಲ್ಲಿಯೂ ಕಾಂಗ್ರೆಸ್ಸಿನ ಲೋಕಸಭೆ ಸದಸ್ಯರ, ಶಾಸಕರ ಸಭೆ ದಿಲ್ಲಿಯಲ್ಲಿಯೂ ಸೇರಿತ್ತು. ಕೆಳಗಿನಿಂದ ಮೇಲಿನವರೆಗೆ ಪಕ್ಷದ ಘಟಕಗಳ ಚುನಾವಣೆ ನಡೆಸಿ ಅಖಿಲಭಾರತ ಮಟ್ಟದ ಸಮಾವೇಶ ಜನತಾ ಪಾರ್ಟಿದ್ದಾಗಿತ್ತು. ಕಳೆದ ಹದಿನೈದು ವರ್ಷಗಳಿಂದಲೂ ತನ್ನ ಪಕ್ಷದಲ್ಲಿ ಚುನಾವಣೆ ನಡೆಸದೆ, ತನ್ನ ವೈಯ್ಯಕ್ತಿಕ ಪ್ರಭಾವದಿಂದಲೇ ಲೋಕಸಭೆ ಶಾಸನ ಸಭೆಗಳಿಗೆ ಉಮೇದುವಾರರನ್ನು ಆರಿಸಿ ಅಂಥವರ ಸಭೆಯನ್ನು ಇಂದಿರಾಗಾಂಧಿ ಸೇರಿಸಿದ್ದರು.

ಮುಂಬರುವ ಲೋಕಸಭೆ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡೇ ಈ ಸಮಾವೇಶಗಳು ಸೇರಿವೆಂಬ ಅಭಿಪ್ರಾಯ ಸಾರ್ವಜನಿಕರಲ್ಲಿ ಮೂಡಿ ಬಂದಿದೆ. 1980 ರಂಥ ಸುಲಭ ಗೆಲುವು 1985 ರಲ್ಲಿ ತನಗೆ ಸಿಗಲು ಸಾಧ್ಯವಿಲ್ಲ, 1983 ರಲ್ಲಿ ಪ. ಬಂಗಾಲ ತ್ರಿಪುರಾಗಳನ್ನು ಬಿಟ್ಟು, ಆಂಧ್ರ-ಕರ್ನಾಟಕದಲ್ಲಿಯೂ ತನಗೆ ಸೋಲು ಉಂಟಾಗಿ, ಕಾಶ್ಮೀರದ ಡಾ॥ ಅಬ್ದುಲ್ಲಾ ವಿರೋಧ ಪಕ್ಷ ಜೊತೆ ಸೇರಿಕೊಂಡಿರುವಾಗ ಕೇಂದ್ರ ಸರಕಾರದ ಆಡಳಿತ, ಯೋಜನೆಗಳೂ, 20 ಅಂಶ ಕಾರ್ಯಕ್ರಮಗಳೂ ಅಪೇಕ್ಷಿಸಿದ ಫಲ ನೀಡದಿರುವಾಗ, ದೇಶದ ಜನತೆ ಎದುರಿಸುತ್ತಿರುವ ಬೆಲೆಯೇರಿಕೆ, ನಿರುದ್ಯೋಗ ಭ್ರಷ್ಟಾಚಾರಗಳಿಗೆ ಪರಿಹಾರ ಕಂಡು ಹಿಡಿಯುವಲ್ಲಿಯೂ, ಅಸ್ಸಾಂ, ಹರಿಯಾಣ, ಪಂಜಾಬಗಳ ಸಮಸ್ಯೆ ಬಗೆಹರಿಸುವಲ್ಲಿಯೂ, ಛಿದ್ರಕಾರಿ, ಜಾತೀಯವಾದಿ ಶಕ್ತಿಗಳ ವಿರುದ್ಧ ಹೋರಾಡುವಲ್ಲಿಯೂ ವಿಫಲರಾಗಿರುವಾಗ, ರೈತರೂ – ಕಾರ್ಮಿಕರೂ ಹೋರಾಟ ಮುಂದುವರಿಸುತ್ತಿರುವಾಗ, ತನ್ನ ಪಕ್ಷದಲ್ಲಿ ಗುಂಪುಗಾರಿಕೆ, ಪಕ್ಷದ ಸರಕಾರಗಳನ್ನು ಪಕ್ಷದವರೇ ಉರುಳಿಸುವ ತಂತ್ರ ಮುಂದುವರಿಸುತ್ತಿರುವಾಗ ಮುಂಬರುವ ಚುನಾವಣೆಯಲ್ಲಿ ಮತದಾರರು ತನಗೆ ಕೈ ಕೊಟ್ಟಾರು ಎಂಬ ಭೀತಿ ಇಂದಿರಾ ಅವರನ್ನು ಕಾಡುತ್ತಿದೆ. ವಿರೋಧ ಪಕ್ಷಗಳು ಮುಖ್ಯವಾಗಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳೆಲ್ಲಾ ಒಂದಾಗಿ ಚಳುವಳಿ–ಹೋರಾಟದ ಕ್ರಮಗಳೊಂದಿಗೆ ಸಂಘಟನೆ, ಏಕತೆಯನ್ನು ಭದ್ರಗೊಳಿಸುತ್ತಿರುವಾಗ ತನ್ನ ಪಕ್ಷದ ಸರಕಾರದ ವಿಫಲತೆಯ ಲಾಭ ಅವರಿಗೆ ದೊರೆತು ತನಗೆ ಸೋಲಾಗಬಹುದೆಂಬ ಭಯವೂ ಇಂದಿರಾ ಹೃದಯವನ್ನು ನಡುಗಿಸುತ್ತಿದೆ. ತಾವು ಅಧ್ಯಕ್ಷಳಾಗಿ, ಮಗ ರಾಜೀವ ಪ್ರಧಾನ ಮಂತ್ರಿಯಾಗುವ ಕನಸೂ ನನಸಾಗದೆಂಬ ಭೀತಿ ಒಡಮೂಡಿದೆ. ಆ ಕಾರಣದಿಂದಲೇ ಲೋಕಸಭೆ ಸದಸ್ಯರ, ಶಾಸಕರ ಒಟ್ಟು 3000 ಮಂದಿಯ ಮೇಳ ದಿಲ್ಲಿಯಲ್ಲಿ ನಡೆಯಿತು. ಪ್ರತಿಯೊಬ್ಬನನ್ನು ಸಂದರ್ಶಿಸಿ ತನ್ನ ಮತಕ್ಷೇತ್ರದಲ್ಲಿ ತಾನು ಮಾಡಿದ ಕೆಲಸ, ಅಲ್ಲಿಯ ಜನರ ಮನೋಭಾವಗಳನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಲಾಯಿತು. ಎಐಸಿಸಿ ಪ್ರಧಾನ ಕಾರ್ಯದರ್ಶಿ ಚಂದಾರಕರ ಅವರ ಹೇಳಿಕೆ ಪ್ರಕಾರ ಈ ರೀತಿಯ ವೈಯ್ಯಕ್ತಿಕ ಸಂದರ್ಶನ ಬಹಳ ಫಲಕಾರಿಯಾಗಿದೆಂದೂ, ಪ್ರಧಾನಿಯವರು ಒತ್ತಿ ಹೇಳುತ್ತಿರುವ 20 ಅಂಶ ಕಾರ್ಯಕ್ರಮಗಳಲ್ಲಿ, ಕುಡಿಯುವ ನೀರಿನ ಪೂರೈಕೆ, ಶಾಲೆ ಮಕ್ಕಳಿಗೆ ಔಷಧೋಪಚಾರ,ಒಣ ಬೇಸಾಯ ಮತ್ತು ನಿರಾವರಿ ಯೋಜನೆಗಳಲ್ಲಿ ಪ್ರಗತಿಯಾಗಿದೆಂದು ತಿಳಿದು ಬಂದಿತೆಂದೂ, ಮುಂದಿನ ಚುನಾವಣೆಯೊಳಗಾಗಿ ಇತರ ಅಂಶಗಳನ್ನು ಶೀಘ್ರವಾಗಿ ಫಲಗೊಳಿಸುವಂತೆ ಕಾರ್ಯ ಮಾಡಲು ಇದು ಸಹಾಯವಾಗುವುದೆಂದೂ ತಿಳಿಸಿದ್ದಾರೆ.

ತನ್ನ ಸರಕಾರದ ಯೋಜನೆಗಳ, ಆಡಳಿತೆಯ ವೈಖರಿಯನ್ನು ತಿಳಿದುಕೊಂಡು, ಅದರಲ್ಲಿ ಸುಧಾರಣೆ ಮಾಡಿ ತನ್ನ ಪಕ್ಷದ ಜನರಲ್ಲಿ ವಿಶ್ವಾಸ ಹುಟ್ಟಿಸುವ ಕಾರ್ಯಕ್ರಮದ ಜೊತೆಯಲ್ಲೇ ಇಂದಿರಾಗಾಂಧಿ ತನ್ನ ಹಳೇ ಪುರಾಣವನ್ನು ಪಠಿಸುವುದರಲ್ಲಿ ಹಿಂದೆ ಬಿದ್ದಿಲ್ಲ. ಸಮಾವೇಶವನ್ನುದ್ದೇಶಿಸಿ ಭಾಷಣ ಮಾಡುತ್ತ ಎಡ ಮತ್ತು ಬಲ ವಿರೋಧ ಪಕ್ಷಗಳು ಸೈದ್ಧಾಂತಿಕವಾಗಿ ವಿರೋಧಿಗಳಾಗಿದ್ದರೂ, ಕಾಂಗ್ರೆಸನ್ನು ಸೋಲಿಸುವ ದೃಷ್ಟಿಯಿಂದಲೇ ಒಂದಾಗುತ್ತಿದ್ದಾರೆಂದೂ ಪಶ್ಚಿಮ ದಿಕ್ಕಿನಿಂದ ನಮ್ಮ ದೇಶಕ್ಕಾಗಬಹುದಾದ ಭೀತಿಯ ಕುರಿತು ವಿರೋಧ ಪಕ್ಷಗಳು ಗಮನ ಹರಿಸುತ್ತಿಲ್ಲೆಂದೂ, "ಸರಕಾರ ನಡೆಸುವ ನಾವೇ ಇದರ ಕುರಿತು ದೇಶವನ್ನೆಚ್ಚರಿಸುವ ಹೆಚ್ಚಿನ ಜವಾಬ್ದಾರಿಯನ್ನು ಹೊತ್ತಿದ್ದೇವೆಂದೂ" ನಾನು ರಾಜಕೀಯವನ್ನು ವ್ಯಕ್ತಿಗತಗೊಳಿಸುತ್ತೇನೆಂದು ಹೇಳುವುದು ಸುಳ್ಳೆಂದೂ ಹೇಳಿದ್ದಾರೆ.

ಇಂದಿರಾಗಾಂಧಿಯ ಸರ್ವಾಧಿಕಾರಿ, ಭ್ರಷ್ಟ ಸರಕಾರವನ್ನು ಸೋಲಿಸಲು ವಿರೋಧ ಪಕ್ಷಗಳೆಲ್ಲ ಶಕ್ತಿ ವಿೂರಿ ದುಡಿಯುತ್ತವೆಂದು ನಾವು ಸ್ಪಷ್ಟ ಹೇಳಲಿಚ್ಛಿಸುತ್ತೇವೆ. ಪಾಕಿಸ್ತಾನದಿಂದ ಮಾತ್ರವಲ್ಲ ಅಮೇರಿಕದ ಸಾಮ್ರಾಜ್ಯಶಾಹಿಗಳಿಂದಲೂ ನಮ್ಮ ದೇಶಕ್ಕೂ, ಸಮತಾವಾದಿ ದೇಶಗಳಿಗೂ, ಇಡೀ ಜಗತ್ತಿಗೂ ಗಂಡಾಂತರವಿದೆಂದು ಪ್ರಚಾರ ಪ್ರಕ್ಷೋಭೆ ನಡೆಸುತ್ತಿರುವವರೂ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳಿದೆ ಇಂದಿರಾ ಮತ್ತು ಆಕೆಯ ಪಕ್ಷವಲ್ಲೆಂಬುದನ್ನೂ ಧೈರ್ಯದಿಂದ ಹೇಳಲಿಚ್ಛಿಸುತ್ತೇವೆ. ಶಾಂತಿ ಚಳುವಳಿಯನ್ನು ತನ್ನ ಮತ್ತು ತನ್ನ ಪಕ್ಷದ ಪ್ರಚಾರಕ್ಕೆ ಇಂದಿರಾಗಾಂಧಿ ಉಪಯೋಗಿಸುತ್ತಿದ್ದಾರಷ್ಟೆ. ಬೆಲೆಯೇರಿಕೆ, ನಿರುದ್ಯೋಗ, ಬಡತನಗಳಲ್ಲಿ ತೊಳಲಾಡುತ್ತಿರುವ ಜನತೆಯನ್ನು ಸಾಮ್ರಾಜ್ಯಶಾಹಿಗಳ ಅಣು ಯುದ್ಧದ ತಯಾರಿಯಿಂದ ಮಾನವ ಕೋಟಿಯನ್ನೂ ಭಾರತ ಜನತೆಯನ್ನೂ ಉಳಿಸುವ ದೃಷ್ಟಿಯಿಂದ ಪ್ರಚಾರ-ಪ್ರಕ್ಷೋಭೆ ಕೈಗೊಂಡು ಜನಜಾಗೃತಿ ಗೊಳಿಸುವ ಕಾರ್ಯವೇನು ಮಾಡಿದ್ದಾರೆಂಬ ಸವಾಲು ಹಾಕುತ್ತೇವೆ. ಸಿಪಿಐ (ಎಂ), ಮತ್ತು ಇತರ ಎಡ ಹಾಗೂ ಪ್ರಜಾಪ್ರಭುತ್ವ ಶಕ್ತಿಗಳೂ, ಪ. ಬಂಗಾಲ, ತ್ರಿಪುರ ಸರಕಾರಗಳೂ ಅಣು ಯುದ್ಧದ ವಿರುದ್ಧ ಶಾಂತಿಗಾಗಿ ನಡೆಸಿರುವ ಚಳುವಳಿ, ಮಾರ್ಚ್ 8-9 ರಂದು 3000 ಪ್ರತಿನಿಧಿಗಳ ದಿಲ್ಲಿ ಸಮಾವೇಶಗಳ ಸುದ್ದಿ ಇಂದಿರಾ ಗಾಂಧಿಯ ಕಿವಿ ಮುಟ್ಟಿರಲಿಕ್ಕಿಲ್ಲ.

ರಾಜೀವ ಗಾಂಧಿಯವರು ತಮ್ಮ ಭಾಷಣದಲ್ಲಿ ತಮ್ಮ ಪಕ್ಷದಲ್ಲಿಯ ಗುಂಪುಗಾರಿಕೆಯ ಕುರಿತು ಎಚ್ಚರಿಕೆ ನೀಡುತ್ತಿರುವಾಗಲೇ, ಶಿಸ್ತಿನ ಕ್ರಮ ಕೈಗೊಳ್ಳುತ್ತೇವೆಂದು ಬೆದರಿಸುತ್ತಿದ್ದಾಗಲೇ, ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ಅಂತುಲೆಯವರು ವಸಂತದಾದಾರವರ ವಿರುದ್ಧ ಬಂಡೆದ್ದಿರುವುದನ್ನು ನೋಡುವಾಗ, ನೂರಾರು ಶಾಸಕರು ಅಂತುಳೆಯವರಿಗೆ ಬಹಿರಂಗವಾಗಿಯೇ ಬೆಂಬಲ ನೀಡುತ್ತಿರುವುದನ್ನು ಕಾಣುವಾಗ ರಾಜೀವರ ದಂಡವಾಗಲೀ, ಹೆದರಿಕೆಯಾಗಲೀ ಯಾವ ಪರಿಣಾಮವನ್ನೂ ಬೀರುತ್ತಿಲ್ಲವೆಂದೂ, ದಿಲ್ಲಿ ಸಮಾವೇಶದ ಪ್ರತಿಫಲ ನಾಯಿಬಾಲದೊಂಕೆಂಬುದನ್ನು ಪ್ರತಿಪಾದಿಸಿ ಕೊಟ್ಟಿದೆಂಬುದನ್ನೂ ತೋರಿಸುತ್ತದೆ.

ಜನತಾ ಸಮಾವೇಶ

ಏಕ ವ್ಯಕ್ತಿ ಸರ್ವಾಧಿಕಾರಿ ಇಂದಿರಾ ಕಾಂಗ್ರೆಸ್ಸಿನ ವಿರುದ್ಧ ಹೋರಾಡುತ್ತಿದ್ದರೂ, ಕೇಂದ್ರ–ರಾಜ್ಯ ಸಂಬಂಧ, ಬೆಲೆಯೇರಿಕೆಗಳಂತ ಸಮಸ್ಯೆಗಳ ಕುರಿತು ಸಿಪಿಐ (ಎಂ) ಮುಂತಾದ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ, ಕಾಂಗ್ರೆಸ್ ವಿರೋಧಿ ಸರಕಾರಗಳ ಜೊತೆಯಲ್ಲಿ ಸೇರಿ ಹೋರಾಡುತ್ತಿದ್ದರೂ ಬಂಡವಾಳಶಾಹಿ ವರ್ಗ ಗುಣವನ್ನೇ ಹೊಂದಿರುವ ಜನತಾ ಪಕ್ಷ ಪಾಟ್ನಾ ಸಮಾವೇಶದಲ್ಲಿ ಕಾಂಗ್ರೆಸನ್ನು ಸೋಲಿಸುವ ಸಲುವಾಗಿ ವಿರೋಧ ಪಕ್ಷಗಳೊಳಗೆ ಹೊಂದಾಣಿಕೆ ಮಾಡಿಕೊಳ್ಳುವ ನಿರ್ಣಯ ಸ್ವೀಕರಿಸಿರುವುದು ಸ್ವಾಗತಾರ್ಹ. ಆದರೆ ಅಲ್ಲಿ ಕೈಗೊಂಡಿರುವ ಆರ್ಥಿಕ ನಿರ್ಣಯ ಮಾತ್ರ ಸಮಂಜಸವಾಗಿಲ್ಲೆಂದೇ ಹೇಳಬೇಕಾಗುತ್ತದೆ. ಬಹುರಾಷ್ಟ್ರೀಯ ಕಂಪೆನಿಗಳ ಉತ್ಪಾದನೆಯನ್ನು ಬಹಿಷ್ಕರಿಸಬೇಕೆಂದು ಹೇಳಿರುವುದು ಯಾವ ಅರ್ಥದಲ್ಲೆಂದು ತಿಳಿಯದಾಗಿದೆ. ಬಹುರಾಷ್ಟ್ರೀಯ ಹಾಗೆಯೇ ಗುತ್ತೇದಾರ ಬಂಡವಾಳದಾರರ ಕಂಪೆನಿಗಳನ್ನು ರಾಷ್ಟ್ರೀಕರಿಸಬೇಕೆಂದೂ, ಅಲ್ಲಿಯ ತನಕ ಅವುಗಳು ಗಳಿಸುವ ಲಾಭದ ಮೇಲೆ ಹತೋಟಿ ಇಡಬೇಕೆಂದೂ ಅವುಗಳು ಈ ದೇಶದಲ್ಲಿ ಗಳಿಸುವ ಲಾಭವನ್ನು ವಿದೇಶಕ್ಕೆ ಕೊಂಡೊಯ್ಯುವುದನ್ನು ತಡೆಯಬೇಕೆಂದೂ ಒತ್ತಾಯ ಮಾಡಬೇಕಾದ್ದು ಅಗತ್ಯ. ಆಧುನಿಕ ಯುಗದಲ್ಲಿ ದೊಡ್ಡ ಕೈಗಾರಿಕೆಗಳನ್ನು ಬಿಟ್ಟುಕೊಟ್ಟು ಬರೇ ಗುಡಿ ಕೈಗಾರಿಕೆಗಳ ಮೇಲೆ ಜನರ ಜೀವನಾವಶ್ಯಕ ಅಗತ್ಯತೆಗಳಿಗಾಗಿ ಅವಲಂಬಿಸುವುದು ಸಾಧ್ಯವಿಲ್ಲೆಂಬುದನ್ನು ತಿಳಿದುಕೊಳ್ಳಬೇಕು. ಜನತಾ ಪಕ್ಷ ಇದನ್ನು ತಿದ್ದಿಕೊಳ್ಳುವುದು ಅಗತ್ಯ. ತಮ್ಮ ಭಾಷಣದಲ್ಲಿ ಅಂತರಾಷ್ಟ್ರೀಯ ವಿಷಯವನ್ನು ಉಲ್ಲೇಖಿಸುತ್ತ ಅಣ್ವಸ್ತ್ರಗಳನ್ನು ಶೇಖರಿಸಿಡುವುದರಿಂದ ಅಭಿವೃದ್ಧಿ ಕೆಲಸಗಳಿಗೆ ಅಡ್ಡಿಯಾಗುತ್ತದೆಂದೂ, ನಿಶ್ಶಸ್ತ್ರೀಕರಣದ ವಿಷಯದ ಕುರಿತು ಚರ್ಚೆ ಮುಂದುವರಿಸುವಂತೆ ರಶ್ಯಾ-ಅಮೇರಿಕ ರಾಷ್ಟ್ರಗಳಿಗೆ ಮನವಿ ಮಾಡಿ, ಅಮೇರಿಕದ ಯುದ್ಧಕೋರ ನೀತಿಯನ್ನು ಖಂಡಿಸಿರುವುದು ಸ್ವಾಗತಾರ್ಹ. ಆದರೆ ಅಫಘಾನಿಸ್ತಾನದ ಸಾರ್ವಭೌಮತ್ವವನ್ನು ರಕ್ಷಿಸಲು ಆ ಸರಕಾರದ ಆದೇಶದ ಮೇರೆಗೆ ಸೋವಿಯತ್ ಯೂನಿಯನ್ ತನ್ನ ಸೈನಿಕರನ್ನು ಅಲ್ಲಿ ನೆಲೆಸಿರುವಾಗ, ಅದನ್ನು ವಾಪಸ್ ಕರೆಸಬೇಕೆಂದು ಹೇಳಿರುವುದು ಸರಿಯಲ್ಲ.

ಒಟ್ಟಾರೆ ಪಾಟ್ನಾದಲ್ಲಿ ಸೇರಿದ ಜನತಾ ಸಮಾವೇಶ ಕಾಂಗ್ರೆಸ್ ವಿರುದ್ಧ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಚಳುವಳಿ ಮುಂದುವರಿಸಲು ಸಹಾಯವಾಗುತ್ತದೆಂದು ಹೇಳಬಹುದು.

ಜೀವನ ವೆಚ್ಚ ಸೂಚ್ಯಂಕ :

ಹೊಸ ಸರಣಿಯ ಏಕಪಕ್ಷೀಯ ನಿರ್ಧಾರಕ್ಕೆ ವಿರೋಧ

ಸೀಲ್ ಸಮಿತಿಯ ಶಿಫಾರಸಿನ ಪ್ರಕಾರ 1981-82ನ್ನು ಆಧಾರವಾಗಿಟ್ಟುಕೊಂಡು ಹೊಸ ಜೀವನ ವೆಚ್ಚ ಸೂಚ್ಯಂಕಗಳನ್ನು ಜ್ಯಾರಿಗೆ ತರಲು ಕೇಂದ್ರ ಸರಕಾರ ಯೋಚಿಸುತ್ತಿದ್ದು, ರಾಷ್ಟ್ರೀಯ ಆಂದೋಲನ ಸಮಿತಿಯ ಎಲ್ಲಾ ಘಟಕಗಳು ಈ ಬಗ್ಗೆ ಕೇಂದ್ರ ಕಾರ್ಮಿಕ ಮಂತ್ರಿಯವರಿಗೆ ತಮ್ಮ ತೀವ್ರ ವಿರೋಧವನ್ನು ವ್ಯಕ್ತಪಡಿಸಿವೆ.

1977 ರಲ್ಲಿ ಈ ಬಗ್ಗೆ ಸರಕಾರ ಡಾ॥ ನೀಲಕಂಠರಾಥ್‌ರವರ ನೇತೃತ್ವದಲ್ಲಿ ನೇಮಿಸಿದ ತ್ರಿಪಕ್ಷೀಯ ಸಮಿತಿ ಜೀವನ ವೆಚ್ಚ ಸೂಚ್ಯಂಕಗಳನ್ನು ಲೆಕ್ಕ ಹಾಕಲು ಬೇಕಾಗುವ ಮಾಹಿತಿಗಳನ್ನು ಕಲೆಹಾಕುವಾಗ ಅದರ ಉಸ್ತುವಾರಿಗೆ ಎಲ್ಲಾ ಹಂತಗಳಲ್ಲಿ ಮತ್ತು ಕೇಂದ್ರ ಮಟ್ಟದಲ್ಲಿ ತ್ರಿಪಕ್ಷೀಯ ಸಮಿತಿಗಳಿರಬೇಕು, 1960 ರ ಸರಣಿಯಲ್ಲಿ ತಪ್ಪುಗಳಿವೆ, ಅದನ್ನು ಸರಿಪಡಿಸಬೇಕು ಹಾಗೂ ಬೆಲೆಗಳ ಬಗ್ಗೆ ಮಾಹಿತಿ ಸಂಗ್ರಹಿಸುವ ವ್ಯವಸ್ಥೆಯನ್ನು ಸುಧಾರಿಸಬೇಕು ಎಂದು ಅವಿರೋಧವಾಗಿ ಶಿಫಾರಸು ಮಾಡಿತ್ತು. ಆದರೆ ಈ ಬಗ್ಗೆ ವಿಚಾರ ವಿಮರ್ಶೆ ನಡೆಸದೆ ಸರಕಾರ ಡಾ. ಸೀಲ್‌ರವರ ನೇತೃತ್ವದಲ್ಲಿ ಇನ್ನೊಂದು ಸಮಿತಿಯನ್ನು ನೇಮಿಸಿತು ಇದು ಕೇವಲ ಸರಕಾರೀ ಅಧಿಕಾರಿಗಳಿದ್ದ ಸಮಿತಿ. ರಾಥ್ ಸಮಿತಿಯ ಅವಿರೋಧ ಶಿಫಾರಸುಗಳ ಬಗ್ಗೆ ಈ ಸಮಿತಿ ಗಮನ ಹರಿಸದೆ ಅವನ್ನು ತಳ್ಳಿ ಹಾಕಿರುವುದರಿಂದ ಈ ಸಮಿತಿಯ ಶಿಫಾರಸುಗಳು ತಮಗೆ ಒಪ್ಪಿಗೆಯಿಲ್ಲವೆಂದು ಕೇಂದ್ರ ಕಾರ್ಮಿಕ ಸಂಘಟನೆಗಳು ಕಾರ್ಮಿಕ ಮಂತ್ರಿಯವರಿಗೆ ಬರೆದ ಪತ್ರದಲ್ಲಿ ತಿಳಿಸಿವೆ.

ಇಷ್ಟು ಮಾತ್ರವಲ್ಲ, ಹೊಸ ಸೂಚ್ಯಂಕ ಸರಣಿಯ ತಯಾರಿಗಾಗಿ ಕುಟುಂಬದ ಆಯವ್ಯಯಗಳ ಬಗ್ಗೆ ಅಧ್ಯಯನ ನಡೆಸಿದ ವಿಧಾನ ಸರಿಯಾಗಿಲ್ಲವೆಂದೂ ಈ ಕಾರ್ಮಿಕ ಸಂಘಗಳು ಹೇಳಿವೆ. ಹೀಗೆ ಕಾರ್ಮಿಕರಿಗೆ ಕೋಟಿಗಟ್ಟಲೆ ರೂಪಾಯಿಗಳಷ್ಟು ಮೋಸ ಮಾಡುವ 1960 ರ ಸರಣಿಯ ಮೋಸಗಳನ್ನು ಸರಿಪಡಿಸದೆ, ಕಾರ್ಮಿಕರನ್ನು ಈ ಬಗ್ಗೆ ವಿಶ್ವಾಸಕ್ಕೆ ತಗೊಳ್ಳದೆ ಹೊಸ ಸರಣಿಯನ್ನು ಆರಂಭಿಸುವುದಕ್ಕೆ ತಮ್ಮ ತೀವ್ರ ವಿರೋಧವಿದೆಯೆಂದು ಕೇಂದ್ರ ಕಾರ್ಮಿಕ ಸಂಘಗಳು ಸ್ಪಷ್ಟಪಡಿಸಿ ಸಮಾಲೋಚನೆಯ ನಂತರವೇ ಮುಂದಿನ ಕ್ರಮ ಕೈಗೊಳ್ಳಬೇಕೆಂದು, ಇಲ್ಲವಾದರೆ ಕಾರ್ಮಿಕರಿಗೆ ಈ ಸೂಚ್ಯಂಕಗಳ ಮೇಲಿನ ವಿಶ್ವಾಸ ಮತ್ತಷ್ಟು ಕುಂದುತ್ತದೆ ಎಂದೂ ಕಾರ್ಮಿಕಮಂತ್ರಿಯವರನ್ನು ಎಚ್ಚರಿಸಿವೆ.

ಪೌರ ಕಾರ್ಮಿಕರ ಬೇಡಿಕೆಗಳು

ಕರ್ನಾಟಕ ರಾಜ್ಯ ನಗರಸಭೆ ಮತ್ತು ಪೌರ ಕಾರ್ಮಿಕರ ಒಕ್ಕೂಟದ ಕಾರ್ಯಕಾರಿ ಸಮಿತಿ ಸಭೆ ಫೆ. 11 ರಂದು ಬೆಂಗಳೂರಿನಲ್ಲಿ ಸೇರಿ ಒಕ್ಕೂಟ ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಚರ್ಚಿಸಿ, ತಮ್ಮ ಬೇಡಿಕೆಗಳ ಕುರಿತು ಸರಕಾರವನ್ನು ಒತ್ತಾಯಿಸುವ ಸಲುವಾಗಿ ಮಾ. 24 ರಂದು ಬೇಡಿಕೆ ದಿನಾಚರಣೆ ಆಚರಿಸಬೇಕೆಂದು ನಿರ್ಣಯಿಸಿತು.

ಒಕ್ಕೂಟದ ಅಧ್ಯಕ್ಷ ಎನ್. ಕೆ. ಉಪಾಧ್ಯಾಯ, ಪ್ರ. ಕಾರ್ಯದರ್ಶಿ ಡಿ. ಎಂ. ಖಲಾಸಿಯನ್ನೊಳಗೊಂಡು 16 ಸದಸ್ಯರು ಪೌರಾಡಳಿತ ಮಂತ್ರಿ ಚಂದ್ರಶೇಖರ ಅವರನ್ನು ತಾ॥ 12 ರಂದು ಭೆಟ್ಟಿಯಾಗಿ, ನಗರ ಸಭೆಗಳ ಆರ್ಥಿಕ ಪರಿಸ್ಥಿತಿ ಕೆಟ್ಟಿರುವುದರಿಂದ ರಾಜ್ಯದ ಶೇ 70 ಕ್ಕೂ ಮೇಲ್ಪಟ್ಟ ನಗರಸಭೆಗಳಲ್ಲಿ ನೌಕರದಾರರಿಗೆ ನಾಲ್ಕೈದು ತಿಂಗಳು ಸಂಬಳ ಸಿಗುತ್ತಿಲ್ಲೆಂದೂ, ಕಾರಣ ಸರಕಾರದವರೇ ಸಂಬಳ ಬಟವಾಡೆ ಮಾಡಬೇಕೆಂದೂ, ಪ್ರತ್ಯೇಕ ನಿರ್ದೇಶನಾಲಯ ರಚಿಸಿ, ಇತರ ಬೇಡಿಕೆಗಳಿಗೆ ಮಂಜೂರಿ ಕೊಡಬೇಕೆಂದೂ ಒತ್ತಾಯ ಪಡಿಸಿದರು.

ಎಂದೂ ಮಾಸದ ನೆನಪು

ಕಯ್ಯೂರು ಹುತಾತ್ಮರ ದಿನಾಚರಣೆ ಸಂಬಂಧ ವಿಶೇಷ ಲೇಖನ.

—ನಿರಂಜನ

ಈ ಮಾರ್ಚ್ 29-ಕಯ್ಯೂರಿನ ನಾಲ್ವರು ಯುವಕ ರೈತರು ಗಲ್ಲು ಗಂಬಕ್ಕೇರಿ ಹುತಾತ್ಮರಾದ ನಾಲ್ವತ್ತೊಂದನೆಯ ವಾರ್ಷಿಕ ದಿನ. ಇದು ದೇಶದೆಲ್ಲ ಶ್ರಮ ಜೀವಿಗಳು ಆ ನಾಲ್ವರ ನೆನಪಿಗೆ ವೀರವಂದನೆ ಸಲ್ಲಿಸಬೇಕಾದ ದಿವಸ.

ಹೋರಾಟದ ಹಿನ್ನೆಲೆ

ಅರುವತ್ತು ಜನ ಆಪಾದಿತರಿಂದ ಹುತಾತ್ಮ ಪಟ್ಟಕ್ಕಾಗಿ ಬ್ರಿಟಿಷ್ ಸಾಮ್ರಾಜ್ಯಶಾಹಿ ಆರಿಸಿದ್ದು ನಾಲ್ಕು ಜನರನ್ನ. ಮಡತಿಲ್ ಅಪ್ಪು, ಪೊಡವರ ಕುಂಞಂಬುನಾಯರ್, ಕೋಯಿತಟ್ಟಿಲ್ ಚಿರುಕಂಡನ್, ಪಳ್ಳಿಕ್ಕಲ್ ಅಬೂಬಕರ್. (ನ್ಯಾಯಾಧೀಶರ ದೃಷ್ಟಿಯಲ್ಲಿ ಕಿರಿಯ ಕೃಷ್ಣನ್‌ನಾಯರ್ ಸಹ ಮರಣದಂಡನೆಗೆ ಅರ್ಹನಾಗಿದ್ದ. ಆದರೆ ಅಪ್ರಾಪ್ತ ವಯಸ್ಕರಿಗೆ-15 ವರ್ಷಕ್ಕಿಂತ ಚಿಕ್ಕವರು-ಗಲ್ಲು ಸಲ್ಲದೆಂಬ ಕಾನೂನು ಅಡ್ಡಿಯಾಗಿತ್ತು. ಹೀಗಾಗಿ, ಆತನೂ ಕೋರನ್ ಮತ್ತು ಕುಟ್ಟಿನ್ ಎಂಬ ಹುಡುಗರೂ ಬಾಲ ಅಪರಾಧಿಗಳ "ಶಾಲೆ"ಗೆ ಕಳಿಸಲ್ಪಟ್ಟರು.)

ಕಾಸರಗೋಡು ತಾಲೂಕಿನ ದಕ್ಷಿಣ ಭಾಗದಲ್ಲಿನ ಕಯ್ಯೂರು ಮತ್ತಿತರ ಗ್ರಾಮಗಳಲ್ಲಿ ರೈತ ಜಾಗೃತಿ ತಲೆದೋರಿದ್ದು 1937 ರಲ್ಲಿ. ಆ ಜಾಗೃತಿ ನಾಲ್ಕೇ ವರ್ಷಗಳಲ್ಲಿ ಬಂಡಾಯದ ಮೊನೆ ಪಡೆಯಿತು. ಕೇರಳದ ಇತರ ಭಾಗಗಳಲ್ಲಿದ್ದಂತೆ ಆ ಪ್ರದೇಶದಲ್ಲಿಯೂ ರೈತರು ಎಡೆಬಿಡದ ಸುಲಿಗೆಗೆ ಒಳಗಾಗಿ ಒಣ ಹುಲ್ಲಿನ ಬಣವೆಯಾಗಿದ್ದರು. ಕ್ರಾಂತಿಯ ವಿಚಾರದ ಕಿಡಿ ತಗಲಿದ್ದೇ ತಡ, ಬಣವೆ ಭುಗಿಲೆಂದಿತು.

ಆ ಬಂಡಾಯವನ್ನು ಅರ್ಥ ಮಾಡಿಕೊಳ್ಳಲು ಶೋಷಕರ, ಶೋಷಿತರ ಕೊಳ್ಳೆಗಾದ ಅಲ್ಲಿನ ಜನರ ಪರಿಸ್ಥಿತಿಯ ಪರಿಚಯ ಅಗತ್ಯ. ಅದನ್ನು ಮಾಡಿಕೊಳ್ಳೋಣ.

ರೈತರು ಗೇಣಿಗೆ (ಲಾವಣಿಗೆ) ಹೊಲ ಹಿಡಿದು, ಒಕ್ಕಲುಗಳಾಗಿ, ಬೇಸಾಯ ಮಾಡುತ್ತಿದ್ದರು; ಕೃಷಿ-ಕಾರ್ಮಿಕರಾಗಿಯೂ ದುಡಿಯುತ್ತಿದ್ದರು. ಮಳೆ ಆಧರಿಸಿದ ಒಂದೇ ಬೆಳೆ. ನೀರಾವರಿ ಸೌಕರ್ಯವಿಲ್ಲ. ಬಿತ್ತನೆಯ ಸಮಯದಲ್ಲಿ (ಜೂನ್, ಜುಲೈ) ಜಮೀನ್ದಾರರಿಂದ ಹತ್ತು ಪರ (ಒಂದು ಪರ= ಹತ್ತು ಸೇರು) ಭತ್ತ ಸಾಲ ಪಡೆದರೆ ಕುಯಿಲು ಆದೊಡನೆ-ಅಕ್ಟೋಬರ್‌ನಲ್ಲಿ-ಹದಿನೂರು ಪರ ಭತ್ತ ಹಿಂತಿರುಗಿಸಬೇಕು. ಇದು ಶೇಕಡ 120 ರ ಬಡ್ಡಿಯ ದರ! ವಿದ್ಯೆಗೆ ಒಂದು ಖಾಸಗಿ ಪ್ರಾಥಮಿಕ ಶಾಲೆ. ಪ್ರೌಢ ವಿದ್ಯಾಭ್ಯಾಸ ಬೇಕಾದರೆ 10-15 ಮೈಲು ದೂರ ಹೋಗಬೇಕು. ಬಡ ರೈತ ಮಕ್ಕಳಿಗೆ ಎಟಕುವ ವಿದ್ಯೆಯಲ್ಲ ಅದು. ತೀಯ ಜನಾಂಗದ ದೇವಸ್ಥಾನಗಳಿಗೂ ಜಮೀನ್ದಾರರೇ ಧರ್ಮದರ್ಶಿಗಳು. ದೈವದ ಆಭರಣಗಳೂ ಜನತೆ ಸಲ್ಲಿಸಿದ ಹಣಕಾಸೂ ಆ ಜಮೀನ್ದಾರರ ವಶದಲ್ಲಿ. ದಲಿತರಾದ ಮವಿಲನ್, ಪುಲಯನ್, ಚೆರುಮನ್-ಈ ಜಾತಿಯವರೆಲ್ಲ ಜನ್ಮಿಗಳ (ಜಮೀನ್ದಾರರ) ಗುಲಾಮರು. ಇವರು ಮನುಷ್ಯರೂಪದ ಪ್ರಾಣಿಗಳೆಂದೇ ಲೆಕ್ಕ. ಹೊಲ, ಹೋರಿ, ನೇಗಿಲುಗಳನ್ನು ಮಾರುವಂತೆ ಈ ಆಳುಗಳನ್ನು ಮಾರುತ್ತಿದ್ದರು, ಇಲ್ಲವೆ ವಿನಿಮಯ ಮಾಡಿಕೊಳ್ಳುತ್ತಿದ್ದರು. ಜನ ಜಮೀನ್ದಾರರನ್ನು ಕಾಣಬೇಕಾದರೆ ಪಾಲಿಸಬೇಕಾದ ನಿರ್ದಿಷ್ಟ ವಿಧಿಗಳಿದ್ದುವು. ತೀಯ ಜಾತಿಯವನು ತೆಂಗಿನ ಕಾಣಿಕೆಯೊಡನೆ ಹೋಗಬೇಕು. ಗಾಣಿಗ ಎಣ್ಣೆಯೊಡನೆ; ನೇಕಾರ ಬಟ್ಟೆಯೊಡನೆ; ಹಸು, ಎತ್ತುಗಳ ಕೊರಳ ಘಂಟೆ ತಯಾರಿಸುವ ಮಣಿಯಾಣಿ ಎಲೆ ಅಡಿಕೆಯೊಡನೆ; ಕಮ್ಮಾರ ಕೃಷಿ ಉಪಕರಣದೊಡನೆ; ಕುಂಬಾರ ಮಡಿಕೆಯೊಡನೆ ಹೀಗೆ ಕಾಣಿಕೆ ಸಲ್ಲಿಸಿದ ಮೇಲೆಯೇ ಪ್ರಭುವಿನೆದುರು ಅಹವಾಲು ಹೇಳಿಕೊಳ್ಳಲು ಅವಕಾಶ. ರೈತ ಎಂದೂ ಚಪ್ಪಲಿ ಮೆಟ್ಟಿಕೊಂಡು ನಡೆಯುವಂತಿಲ್ಲ. ಅವನ ಮುಂಡು ಮೊಣಕಾಲಿನವರೆಗೆ ಮಾತ್ರ ಇರಬೇಕು, ಇಡೀ ಕಾಲುಗಳನ್ನು ಮುಚ್ಚಬಾರದು. ಅಂಗಿ ತೊಡುವಂತಿಲ್ಲ. ತಲೆಗೆ ಅಂಗವಸ್ತ್ರವನ್ನಾಗಲೀ ರುಮಾಲನ್ನಾಗಲೀ ಸುತ್ತಬಾರದು. ಜನ್ಮಿಯ ಎದುರು ನಿಂತೇ ಇರಬೇಕು, ನೆಲದ ಮೇಲೂ ಕುಳಿತುಕೊಳ್ಳಬಾರದು. ಜನ್ಮಿಯನ್ನು "ತಂಬುರಾನೇ" (ದೇವರೇ) ಎಂದೂ ಜಮೀನ್ದಾರಿಣಿಯನ್ನು "ತಂಬುರಾತ್ತಿ" (ದೇವತೆ) ಎಂದೂ ಸಂಬೋಧಿಸಬೇಕು. "ನಾನು ಬಂದಿದ್ದೇನೆ" ಎನ್ನಬಾರದು; ಬದಲು "ಅಡಿಯನ್ (ಅಡಿಯಾಳು) ಬಂದಿದ್ದಾನೆ" ಎನ್ನಬೇಕು! ರೈತರಲ್ಲಿ, ಕೃಷಿ ಕೂಲಿಕಾರರಲ್ಲಿ ಹೆಚ್ಚಿನವರು ತೀಯರು ಮತ್ತು ಇನ್ನೂ ಕೆಳಗಣ ಹಂತದವರು. ಇವರೆಲ್ಲ ಜಮೀನ್ದಾರರ ದೃಷ್ಟಿಯಲ್ಲಿ "ಅಸ್ಪೃಶ್ಯರು". ದೂರ ನಿಲ್ಲಬೇಕಾದವರು.(ಹೆಂಗಸರ ಮೇಲೆ ಕೈ ಮಾಡುವ ವಿಷಯದಲ್ಲಿ ಮಾತ್ರ ಈ ಭೇದಭಾವಗಳು ಅಡ್ಡಿಯಾಗುತ್ತಿರಲಿಲ್ಲ!) ಬ್ರಾಹ್ಮಣ ಮತ್ತು ನಾಯರ್ ಜಮೀನ್ದಾರರೊಡನೆ ರೈತರಿಗೆ ಸಂಪರ್ಕವೇ ಇರುತ್ತಿರಲಿಲ್ಲ ಎನ್ನಬಹುದು. ಯಾವ ಕ್ಷಣದಲ್ಲಾದರೂ ಯಾವ ಕಾರಣಕ್ಕಾದರೂ ಒಬ್ಬ ರೈತನನ್ನು ಹೊಲ ಬಿಡಿಸಿ ಓಡಿಸಲು ಜಮೀನ್ದಾರರು ಶಕ್ತರಾಗಿದ್ದರು. ವಸೂಲಿ, ಹೊಡೆತ ಬಡೆತ, ಒಕ್ಕಲೆಬ್ಬಿಸುವುದು, ಇವನ್ನೆಲ್ಲಾ ಜಮೀನ್ದಾರರ ಗುಂಡಾಗಳು ಮಾಡುತ್ತಿದ್ದರು. ಓಣಂ ಹಬ್ಬ ವಿಷುಹಬ್ಬಗಳ ಸಮಯದಲ್ಲಿ ಏನಾದರೊಂದು ಬಗೆಯ ಕಾಣಿಕೆ ತರಬೇಕು. ತರಕಾರಿ, ಬೇರೆ ವ್ಯವಸಾಯೋತ್ಪನ್ನಗಳು-ಏನಾದರೂ ಸರಿಯೇ. ಜನ್ಮಿಯ ಮನೆಯಲ್ಲಿ ಕಥಕ್ಕಳಿ ಇದ್ದರೆ ಇಡೀ ಗ್ರಾಮದಿಂದ ವಂತಿಗೆ ವಸೂಲಿ.

ಇವಲ್ಲದೆ ಆಗಾಗ್ಗೆ ಸಲ್ಲಿಸಬೇಕಾದ ಬೇರೆ ಕಾಣಿಕೆಗಳಿದ್ದುವು. ಒಂದು ಕಾಣಿಕೆ 'ಮುಕ್ಕಾಲ್' (ನಗದು ಹಣ) ಇನ್ನೊಂದು "ಶೀಲಕ್ಕಾಸ್"—ಶಿಷ್ಟಾಚಾರದ ಕಾಣಿಕೆ, ಹಣದ ರೂಪದಲ್ಲಿ. 'ನುರಿ' ಮತ್ತು "ವಾಶಿ" ಬೇರೆ ಎರಡು ಬಗೆಯ ಕಡ್ಡಾಯ ಕಾಣಿಕೆಗಳು. (ಫಸಲು ಆದ ಮೇಲೆ ಭತ್ತ ಅಳೆಯುವಾಗ ಜಮೀನ್ದಾರನ ಪಾಲಿನ ಪ್ರತಿ ಅಳತೆಗೂ ಒಮ್ಮೆ, ಲೆಕ್ಕದ ಗುರುತಿಗಾಗಿ, ಒಂದಿಷ್ಟು ಭತ್ತ ಗುಪ್ಪೆ ಇಡಬೇಕು. ಅದು 'ನುರಿ'. ಒಡೆಯನಿಗೆ ಕೊಡುವ ಭಾಗದ ಭತ್ತ "ಸೊರಗಿ" ನಷ್ಟವಾಗಬಾರದೆಂದು, ಹತ್ತು ಸೇರು ಭತ್ತಕ್ಕೆ ಎರಡು ಸೇರಿನಂತೆ ನಷ್ಟ ಭರ್ತಿ ಮಾಡಿಕೊಡುವುದು "ವಶಿ".)

ಹೋರಾಟದ ದಾರಿ

ಮೇಲಿನ ಹಿನ್ನೆಲೆಯ ಪರಿಚಯದಿಂದ, ಒಂದು ಕಿಡಿ ಹೇಗೆ ಉರಿಯಾಯಿತು, ಉರಿ ಹೇಗೆ ದಳ್ಳುರಿಯಾಯಿತು ಎಂಬುದನ್ನು ಸುಲಭವಾಗಿ ಕಲ್ಪಿಸಿಕೊಳ್ಳಬಹುದು. ಭೂಗತ ಕ್ರಾಂತಿಕಾರಿಗಳಿಂದ ಪ್ರೇರಣೆ ಪಡೆದು, ಅವರ ಮಾರ್ಗದರ್ಶನದಲ್ಲಿ, ರೈತರು, ಕೃಷಿ ಕಾರ್ಮಿಕರು, ಸಣ್ಣ ಹಿಡುವಳಿದಾರರು ಸಂಘಟಿತರಾದರು. ವಿದೇಶೀಯ ಸುಲಿಗೆಗಾರರಿಂದಿರಾದ ಸ್ವಾತಂತ್ರ್ಯ ಘೋಷಗಳ ಜತೆಗೆ, 'ಜನ್ಮಿತ್ವ ನಾಶವಾಗಲಿ' (ಜಮೀನ್ದಾರಿ ಪದ್ಧತಿ ಅಳಿಯಲಿ!) ಎಂಬ ಘೋಷವೂ ಮೊಳಗಿತು. ರಾಷ್ಟ್ರ ಪ್ರಜ್ಞೆ, ಸಾಮಾಜಿಕ ಪ್ರಜ್ಞೆ, ವರ್ಗಪ್ರಜ್ಞೆಗಳು ಪರಸ್ಪರ ಹೆಣೆದುಕೊಂಡುವು. "ಇಂಕ್ವಿಲಾಬ್ ಜಿಂದಾಬಾದ್" (ಕ್ರಾಂತಿ ಚಿರಾಯುವಾಗಲಿ) ಎಂಬ ಉದ್ಘೋಷ ಜನ ಜಾಗೃತಿಯ ಸಂಕೇತವಾಯಿತು. ತ್ರಿವರ್ಣ ಧ್ವಜದ ಜತೆಗೆ ಕೆಂಪು ಬಾವುಟ ಮೆರೆಯಿತು.

1941 ಮಾರ್ಚ್ 28 ರಂದು ಕಯ್ಯೂರಿನ ರೈತರ ಮೆರವಣಿಗೆಯನ್ನು ಮುರಿಯಲೆತ್ನಿಸಿದ ಪೋಲೀಸನೊಬ್ಬ ಜನರ, ಅವನಿಂದೆ ಆಕ್ರೋಶಗಳಿಗೆ ತುತ್ತಾಗಿ ಕಾರಿಯಂಗೋಟ್ ನದಿಗೆ ಹಾರಿ ಅಪಮೃತ್ಯುವಿಗೆ ತುತ್ತಾದ. ಮುಂದಿನದು ಮರ್ದನ ಕಾಂಡ. ಎರಡು ವರ್ಷ ಕಾಲ ಮಂಗಳೂರಿನಲ್ಲೂ, ಅಪೀಲುಗಳ ರೂಪದಲ್ಲಿ ಮದರಾಸು, ಲಂಡನ್‌ಗಳಲ್ಲೂ ವಿಚಾರಣೆಯ ನಾಟಕ ನಡೆಯಿತು. ಸಾಮ್ರಾಜ್ಯ ಶಾಹಿ ಪಟ್ಟು ಬಿಡಲಿಲ್ಲ. "ಬಲಿಬೇಕು, ನರಬಲಿ ಬೇಕು," ಎಂದಿತು.

1943 ಮಾರ್ಚ್ 29 ರಂದು ಬೆಳಗ್ಗೆ ಆರು ಘಂಟೆಗೆ ಕಣ್ಣನ್ನೂರು ಸೆಂಟ್ರಲ್ ಜೈಲಿನಲ್ಲಿ ಕಯ್ಯೂರಿನ ನಾಲ್ವರು ವೀರರಿಗೆ ಫಾಶೀ ಶಿಕ್ಷೆಯಾಯಿತು. ಜೀವದ ಹಂಗನ್ನು ಎಂದೋ ತೊರೆದಿದ್ದ ಆ ಯುವಕರು, ಕ್ರಾಂತಿ ಘೋಷ ಕೂಗುತ್ತ ದಿಟ್ಟ ಹೆಜ್ಜೆಗಳನ್ನಿಡುತ್ತ ನೇಣುಗಂಬಗಳತ್ತ ಸಾಗಿ ಹುತಾತ್ಮರಾದರು.

ಸಾವಲ್ಲ ; ಅಮರತ್ವ

ಶಿಕ್ಷೆಯ ದಿನವನ್ನೂ ವೇಳೆಯನ್ನೂ ಅಧಿಕಾರಿಗಳು ಗೋಪ್ಯವಾಗಿ ಇಟ್ಟಿದ್ದರೂ ಸುದ್ದಿ ಸದ್ದಿಲ್ಲದೆ ರೆಕ್ಕೆ ಬಡಿಯುತ್ತ ಕಣ್ಣನ್ನೂರಿನಲ್ಲಿ ಸಂಚರಿಸಿತ್ತು. ಚುಮು ಚುಮು ಬೆಳಕಿನಲ್ಲಿ ಜೈಲಿನ ಹೊರಗೆ ಜೀವ ಸ್ಪಂದಿಸಿತು. ನೆರೆದಿದ್ದ ಮೂರು ಸಾವಿರ ಜನಸಂದಣಿ "ಶವಗಳನ್ನು ಕೊಡಿ" ಎಂದು ಭೋರ್ಗರೆಯಿತು.

ಸೆರೆಮನೆಯ ಅಧಿಕಾರಿ ಸಮ್ಮತಿಸಲಿಲ್ಲ. ಜೈಲಿನ ಆವರಣದೊಳಗೇ ಹೊಂಡಗಳನ್ನು ಅವಸರ ಅವಸರವಾಗಿ ತೋಡಿಸಿ, ಶವಗಳನ್ನು ಮಣ್ಣು ಮಾಡಿಸಿದ.

ವಾಸ್ತವ ಬದುಕಿನ ಮುಂದುವರಿಕೆಯಾಗಿತ್ತು ಆ ಸಾವು-ಎಂದೂ ಮಾಸದ ನೆನಪಾಗಿ ಮಾರ್ಪಟ್ಟ ಸಾವು.

ಕಾಂಗ್ರೆಸ್ ಮೇಳಕ್ಕೆ ಸರಕಾರದ ಹಣ

ದಿಲ್ಲಿಯಲ್ಲಿ ನಡೆದ 3 ದಿನಗಳ ಸಮಾವೇಶದ ಸಮಯದಲ್ಲಿ ಕಾಂಗ್ರೆಸ್ ಮುಖಂಡರೆಲ್ಲ ಪಂಚತಾರಾ ಹೋಟೆಲುಗಳಲ್ಲಿ ಸಂಭ್ರಮದ ಮೋಜಮಾನಿ ಮಾಡಿದ್ದಾರೆಂಬ ಆರೋಪ ಬಂದಾಗ ಇಂದಿರಾಗಾಂಧಿ ಅದನ್ನು ತಳ್ಳಿ ಹಾಕಿದ್ದರು. ಆದರೆ ಅವರ ಹೇಳಿಕೆ ಸತ್ಯಕ್ಕೆ ದೂರವಾಗಿದೆಂದೂ, ಹಲವಾರು ರಾಜ್ಯ ಸರಕಾರಗಳು ದಿಲ್ಲಿಗೆ ಬಂದ ಮಂತ್ರಿ ಮತ್ತಿನ್ನಿತರ ಮುಖಂಡರಿಗಾಗಿ ಲಕ್ಷಾವಧಿ ರೂಪಾಯಿ ಪೋಲು ಮಾಡಿದ್ದಾರೆಂಬುದಕ್ಕೆ ಸಾಕ್ಷಿಯಾಗಿ ಕೆಳಗಿನಂಶಗಳನ್ನು ಓದುಗರಿಗೆ ಒದಗಿಸುತ್ತಿದ್ದೇವೆ.

ಎಐಸಿಸಿ ಸರ್ಕ್ಯುಲರ್ ಪ್ರಕಾರ ಶಾಸಕರಿಗೆ ಲೋಕಸಭಾ ಸದಸ್ಯರ ಮನೆಗಳಲ್ಲಿ ವ್ಯವಸ್ಥೆ ಮಾಡಲಾಗುವುದೆಂದೂ, ಮೀಟಿಂಗಿನ ಸ್ಥಳಕ್ಕೆ ಹೋಗಲು ಕನಿಷ್ಠ ವ್ಯವಸ್ಥೆ ಮಾಡಲಾಗುವುದೆಂದೂ ತಿಳಿಸಲಾಗಿತ್ತು. ಯಾವ ಶಾಸಕನೂ ಈ ಆದೇಶ ಪಾಲಿಸಲಿಲ್ಲ. ಇಂಡಿಯಾ ಟೂರಿಸಂ ಡೆವಲಪ್‌ಮೆಂಟ್ ಕಾರ್ಪೊರೇಶನ್ ಯಾತ್ರಿಕರನಿವಾಸದಲ್ಲಿ ಒರಿಸ್ಸಾ ಭವನದವರು 54, ಅಸ್ಸಾಂ 28, ಮಧ್ಯ ಪ್ರದೇಶ 11 ಕೊಠಡಿಗಳನ್ನು ಕಾದಿರಿಸಿದ್ದರು. ಪ್ರತಿ ದಿನ ರೂ 100/ ಬಾಡಿಗೆ. ರಾಜ್ಯ ಸರಕಾರಗಳು ಇದಕ್ಕೆ ಮುಂಗಡ ಹಣ ಕೊಟ್ಟಿವೆ. ಈ ರೀತಿ ಸರಕಾರ ಕೊಠಡಿ ಹಿಡಿಯುವುದು ಕಾನೂನಿಗೆ ವಿರುದ್ಧವಾಗಿದೆ. ಅಶೋಕ ಹೋಟೆಲಿನಲ್ಲಿ 3 ಉತ್ತರ ಪ್ರದೇಶದ, 1 ಮಹಾರಾಷ್ಟ್ರದ ಮಂತ್ರಿಗಳು ವಾಸಿಸಿದ್ದರು. ಇವರ ಪ್ರತಿ ಕೊಠಡಿಗೆ ಪ್ರತಿ ದಿವಸ ರೂ 1250 ಬಾಡಿಗೆ. ಮಧ್ಯ ಪ್ರದೇಶದ ಎಲ್ಲ ಕ್ಯಾಬಿನೆಟ್ ಮಂತ್ರಿಗಳು ಪಂಚತಾರ ಹೋಟೆಲ್ ಕಾನಿಷ್ಕಾದಲ್ಲಿದ್ದರು. ಪ್ರತಿಯೊಬ್ಬನಿಗೆ ದಿನ ರೂ. 675. ಮುಖ್ಯಮಂತ್ರಿ ಅರ್ಜುನ್ ಸಿಂಗ್ ಅವರು ಮೌರ್ಯ ಪ್ಯಾಲೇಸ್ ಶೆರಟಾನ್ ಹೋಟೆಲ್ ಮಾಲಕರ ಅಥಿತಿಯಾಗಿದ್ದರು.

ಯು.ಪಿ.ಯ 13, ರಾಜಸ್ಥಾನದ 4, ನಾಗಾಲ್ಯಾಂಡಿನ 4 ಮಂತ್ರಿಗಳು ಪ್ರತಿದಿನ ರೂ 700 ಬಾಡಿಗೆಯ ಸಾಮ್ರಾಟ್ ಹೋಟೆಲಿನಲ್ಲಿದ್ದರು. ರಾಜ್ಯ ಸರಕಾರಗಳೇ ಇವರ ಬಿಲ್ಲುಗಳನ್ನೆಲ್ಲ ಕೊಟ್ಟಿದ್ದಾರೆ. ಸರಕಾರಿ ಕೆಲಸಕ್ಕೆ ಬಂದರೆ ಈ ಹೋಟೆಲುಗಳ ಬಿಲ್ಲಿನಲ್ಲಿ ಶೇ.20 ಕಮಿಶನ್ ಸಿಗುತ್ತದಂತೆ. ಮಂತ್ರಿಗಳೆಲ್ಲ ಸರಕಾರಿ ಕೆಲಸಕ್ಕೆ ಬಂದಿರುವುದರಿಂದ ಕಮಿಶನ್ ಕೊಡಬೇಕೆಂದು ಸರಕಾರಗಳು ಕೇಳಿವೆಯಂತೆ. ಒಬ್ಬ ಯು.ಪಿ.ಯ ಮಂತ್ರಿ ಅಕ್ಬರ್ ಹೋಟೆಲಿನಲ್ಲೂ ಅದಕ್ಕಿಂತ ಕಡಿಮೆ ದರ್ಜೆಯವರೆಲ್ಲ ಸಾರ್ವಜನಿಕ ಕ್ಷೇತ್ರದ, ಕೈಗಾರಿಕೆಗಳ, ನಿಗಮಗಳ ಅತಿಥಿ ಗೃಹಗಳಲ್ಲಿ ಬಿಡಾರ ಹೂಡಿದ್ದರು. ಸಭೆಯ ಸ್ಥಳಕ್ಕೆ ಹೋಗಲು ವೀಡಿಯೋಲಕ್ಸುರಿ ಬಸ್‌ಗಳ, ಕಾರು ಮತ್ತು ಟ್ಯಾಕ್ಸಿಗಳ ವ್ಯವಸ್ಥೆ ಮಾಡಲಾಗಿತ್ತು. ಇದಲ್ಲದೆ ಎಲ್ಲ ರಾಜ್ಯಗಳ ಭವನಗಳೂ ನೂರಾರು ಟ್ಯಾಕ್ಸಿಗಳ ವ್ಯವಸ್ಥೆ ಮಾಡಿವೆ. ಒಂದು ಟ್ಯಾಕ್ಸಿಗೆ ದಿನಕ್ಕೆ ರೂ. 400 ಕೊಡಲಾಗಿದೆಯಂತೆ. ಇದಲ್ಲದೆ ಲೋಕಸಭೆ ಸದಸ್ಯ ಟೈಲರ್ ಮತ್ತು ಸಜ್ಜನ ಕುಮಾರ ಎಂಬುವರು 35 ಬಸ್‌ಗಳ ವ್ಯವಸ್ಥೆ ಮಾಡಿದ್ದರು. ಅವುಗಳಿಗೆ ರೂ. 50 000 ಖರ್ಚಾಗಿದೆಯಂತೆ.

ಬಡವರ ತಾಯಿ ಇಂದಿರಾಗಾಂಧಿಯ 20 ಅಂಶಗಳ ಕಾರ್ಯಾಚರಣೆಯನ್ನು ವಿವಿಧ ರಾಜ್ಯ ಸರಕಾರಗಳೂ ಮಂತ್ರಿಗಳೂ ಯಾವ ರೀತಿ ಅನುಷ್ಠಾನದಲ್ಲಿ ತರುತ್ತಿದ್ದಾರೆಂಬುದಕ್ಕೆ ಈ ಮೇಳದ ಲ್ಲಾದ ವೈಭವವೇ ಸಾಕ್ಷಿ.

ಕಾರ್ಲ್ ಮಾರ್ಕ್ಸ್ ಮರಣ ಶತಾಬ್ಧಿಯ ಮುಕ್ತಾಯ

ಕಾರ್ಲ್ ಮಾರ್ಕ್ಸ್‌ರ ಬೋಧೆಗಳು ಅಮರ

—ಎಂ. ಬಸವಪುನ್ನಯ್ಯ

1983 ರ ಮಾರ್ಚ್ 14 ರಿಂದ ಜಗತ್ತಿನಾದ್ಯಂತ ಒಂದು ವರ್ಷ ಕಾಲ ಆಚರಿಸಲ್ಪಟ್ಟ ಕಾರ್ಲ್ ಮಾರ್ಕ್ಸ್‌ರ ಮರಣ ಶತಾಬ್ಧಿ ಇದೇ ಮಾರ್ಚ್ 14 ಕ್ಕೆ ಕೊನೆ ಗೊಂಡಿದೆ. ಈ ಒಂದು ವರ್ಷದ ಅವಧಿಯಲ್ಲಿ ಜಗತ್ತಿನಾದ್ಯಂತ ಇರುವ ಕಮ್ಯೂನಿಸ್ಟ್ ಪಕ್ಷಗಳು ಮಾರ್ಕ್ಸ್‌ರ ಸಿದ್ಧಾಂತವನ್ನು ಪ್ರಚಾರ ಮಾಡುವ ದಿಸೆಯಲ್ಲಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದವು.

ಕಳೆದ ವರ್ಷದ ಮಾರ್ಚ್ 14 ರಂದು "ಐಕ್ಯರಂಗ" ಕಾರ್ಲ್ ಮಾರ್ಕ್ಸ್‌ರ ಕುರಿತಾದ ವಿಶೇಷ ಸಂಚಿಕೆಯೊಂದನ್ನು ತನ್ನ ಓದುಗರಿಗೆ ನೀಡಿತ್ತು. ಅಲ್ಲದೆ ಲೇಖನ ಮಾಲೆಯನ್ನು ಪ್ರಾರಂಭಿಸಿ ಮಾರ್ಕ್ಸ್‌ವಾದದ ಕುರಿತು ಬೆಳಕು ಚೆಲ್ಲುವ ಅನೇಕ ಲೇಖನಗಳನ್ನು ಪ್ರಕಟಿಸಿತ್ತು. ಕಳೆದ ಸಂಚಿಕೆಯಲ್ಲಿ ಕಾರ್ಲ್ ಮಾರ್ಕ್ಸ್‌ರ ಮರಣ ಶತಾಬ್ಧಿಯ ಮುಕ್ತಾಯ ಸಂಧರ್ಭದಲ್ಲಿ ಸಿ. ಪಿ. ಐ. (ಎಂ) ನ ಪೊಲಿಟ್‌ಬ್ಯೂರೋ ಸದಸ್ಯರಾದ ಹಿರಿಯ ಮಾರ್ಕ್ಸ್‌ವಾದಿಯಾಗಿರುವ ಕಾ. ಎಂ. ಬಸವಪುನ್ನಯ್ಯ ಅವರ ಲೇಖನದ ಅನುವಾದದ ಮೊದಲ ಕಂತನ್ನು ಪ್ರಕಟಿಸಿದ್ದೆವು.

ಪ್ರಸ್ತುತ ಸಂಚಿಕೆಯಲ್ಲಿ ಲೇಖನದ ಎರಡನೆಯ ಹಾಗೂ ಕೊನೆಯ ಕಂತನ್ನು ಪ್ರಕಟಿಸುತ್ತಿದ್ದೇವೆ.

(ಹಿಂದಿನ ಸಂಚಿಕೆಯಿಂದ)

ಮಾನವ ಕುಲದ ವಿಮೋಚನೆ

ಮಾರ್ಕ್ಸ್‌ವಾದೀ ಸಿದ್ಧಾಂತ ಮಾನವ ವಿಮೋಚನೆಯ ವ್ಯಾಪಕ ಪ್ರಕ್ರಿಯನ್ನು ಕೂಲಿ-ಗುಲಾಮಿಕೆಯ ಬಂಧನದಿಂದ ಕಾರ್ಮಿಕ ವರ್ಗದ ವಿಮೋಚನೆಯೊಂದಿಗೆ ಜೋಡಿಸುತ್ತದೆ. ಇದೇ ಅದರ ವಿಶಿಷ್ಟವಾದ ಮಹಾನ್ ಕೊಡುಗೆ. ಮಾರ್ಕ್ಸ್ ಕಾರ್ಮಿಕರನ್ನು ದೇವರುಗಳನ್ನಾಗಿ ಮಾಡುತ್ತಿದ್ದಾರೆ ಎಂಬ ಅಪಾದನೆಯನ್ನು ನಿರಾಕರಿಸುತ್ತಾ ತನ್ನ ಅಭಿಪ್ರಾಯವನ್ನು ಹೀಗೆ ಮಂಡಿಸಿದ್ದಾರೆ.

"ಎಲ್ಲಾ ಮಾನವ ಕುಲದ ಅಮೂರ್ತ ಸ್ವರೂಪವನ್ನು ಅದರ ತೋರಿಕೆಯ ಅಮೂರ್ತ ಸ್ವರೂಪವನ್ನೂ ಕೂಡಾ ಸಂಪೂರ್ಣವಾಗಿ ಬೆಳೆದ ಕಾರ್ಮಿಕ ವರ್ಗದಲ್ಲಿ ಸುಮಾರಾಗಿ ಪೂರ್ಣವಾಗಿಯೇ ಕಾಣಬಹುದು. ಯಾಕೆಂದರೆ ಕಾರ್ಮಿಕ ವರ್ಗದ ಜೀವನ ಪರಿಸ್ಥಿತಿ ಸಮಕಾಲೀನ ಸಮಾಜದ ಅಮಾನವೀಯ ಪರಿಸ್ಥಿತಿಗಳ ಸಂಗಮ ಬಿಂದು. ಯಾಕೆಂದರೆ ಮಾನವ ಜೀವಿ ಕಾರ್ಮಿಕನಲ್ಲಿ ಕಳೆದು ಹೋಗಿದ್ದಾನೆ. ಆದರೆ ಅವನ ಮೂಲಕ ಈ ರೀತಿ ಕಳೆದುಕೊಂಡುದರ ಸೈದ್ಧಾಂತಿಕ ಪ್ರಜ್ಞೆ ಪಡೆಕೊಂಡಿದ್ದಾನೆ. ಮತ್ತು ಈ ಅಮಾನವೀಯತೆಯ ವಿರುದ್ಧ ಬಂಡಾಯವೇಳಬೇಕಾದ ಅಪರಿಹಾರ್ಯ ಮತ್ತು ಅನಿವಾರ್ಯ ಒತ್ತಡ ಅವನ ಮೇಲಿದೆ. ಕಾರ್ಮಿಕ ವರ್ಗ ತನ್ನನ್ನು ವಿಮೋಚನೆಗೊಳಿಸಿಕೊಳ್ಳಬೇಕಾಗಿದೆ ಮತ್ತು ಅದು ಸಾಧ್ಯವೂ ಆಗಿದೆ. ಈ ಅಗತ್ಯ ಅವಶ್ಯಕವಾಗಿ ಆಗ ಬೇಕಾದುದರ ವ್ಯಾವಹಾರಿಕ ಅಭಿವ್ಯಕ್ತಿ. ಆದರೆ ಕಾರ್ಮಿಕ ವರ್ಗ ಪರಿಸ್ಥಿತಿಗಳನ್ನು ನಿವಾರಿಸದೆ ತನ್ನನ್ನು ವಿಮೋಚಿಸಿಕೊಳ್ಳುವುದು ಸಾಧ್ಯವಿಲ್ಲ. ಈ ಪರಿಸ್ಥಿತಿಗಳ ನಿವಾರಣೆ ಸಾಮಾಜಿಕ ಜೀವನದ ಎಲ್ಲಾ ಅಮಾನವೀಯ ಪರಿಸ್ಥಿತಿಗಳನ್ನು ನಿವಾರಿಸದೆ ಸಾಧ್ಯವಿಲ್ಲ. ಸಾಮಾಜಿಕ ಜೀವನದ ಅಮಾನವೀಯ ಪರಿಸ್ಥಿತಿಗಳ ಒಟ್ಟು ಸಂಕಲನವೇ ಕಾರ್ಮಿಕವರ್ಗ ಎದುರಿಸುತ್ತಿರುವ ಪರಿಸ್ಥಿತಿ."

"ಸಮಾಜ ಮಾನವ ಮತ್ತು ನಿಸರ್ಗದ ನಡುವೆ ಇರಬೇಕಾದ ಐಕ್ಯತೆಯನ್ನು ಪೂರ್ಣಗೊಳಿಸುತ್ತದೆ; ನಿಸರ್ಗದ ಪ್ರಾಮಾಣಿಕ ಪುನರುಜ್ಜೀವನವಿದು ಮಾನವ ಸಾಧಿಸಿದ ನೈಸರ್ಗಿಕತೆ ಮತ್ತು ನಿಸರ್ಗ ಸಾಧಿಸಿದ ಮಾನವೀಯತೆಯಿದು."

"ಇಲ್ಲಿಂದು, ಅಲ್ಲಿಂದು ಕಾರ್ಮಿಕ ಅಥವಾ ಸಮಸ್ತ ಕಾರ್ಮಿಕವರ್ಗ ತನ್ನ ಉದ್ದೇಶ ಏನೆಂದು ಊಹಿಸಿಕೊಳ್ಳಬಹುದು ಎಂಬುದು ಇಲ್ಲಿನ ಮುಖ್ಯ ಪ್ರಶ್ನೆಯಲ್ಲ. ಆದರೆ ಈ ಅಸ್ತಿತ್ವದ ಫಲವಾಗಿ ಕಾರ್ಮಿಕ ನಿಜವಾಗಿಯೂ ಏನಾಗಿದ್ದಾನೆ ಮತ್ತು ಚಾರಿತ್ರಿಕವಾಗಿ ಕಾರ್ಮಿಕವರ್ಗ ಮಾಡಬೇಕಾದುದೇನು ಎಂಬುದೇ ಪ್ರಶ್ನೆ. ಸ್ವತಃ ತನ್ನ ಜೀವನದ ಸ್ಥಿತಿ-ಗತಿಗಳಲ್ಲಿ ಮತ್ತು ಸಮಕಾಲೀನ ಬೂರ್ಜ್ವಾ ಸಮಾಜದ ಸಮಸ್ತ ಸಂಘಟನೆಯಲ್ಲೇ ಕಾರ್ಮಿಕ ವರ್ಗದ ಉದ್ದೇಶ ಮತ್ತು ಕಾರ್ಯಾಚರಣೆ ಮುಂಗಡವಾಗಿ, ಬದಲಿಸಲಾಗದ ರೀತಿಯಲ್ಲಿ ಮತ್ತು ಸ್ಪಷ್ಟವಾಗಿ ನಿರೂಪಿತಗೊಂಡಿರುತ್ತದೆ."

ಯುದ್ಧಗಳಿಗೆ ವಿರೋಧ

ಜಾಗತಿಕ ಮಟ್ಟದ ಆಧುನಿಕ ಕಾರ್ಮಿಕ ಆಂದೋಲನದ ಇತಿಹಾಸ ಮಾರ್ಕ್ಸ್‌ರ ಈ ವೈಜ್ಞಾನಿಕ ಭವಿಷ್ಯವಾಣಿಯನ್ನು ನಿಜಗೊಳಿಸಿದೆ. ಜಾಗತಿಕ ಮಟ್ಟದಲ್ಲಿ "ಬೂರ್ಜ್ವಾ ವರ್ಗದ ಯುಗ" ಬಹಳ ಹಿಂದೆಯೇ ಕೊನೆಗೊಂಡಿದೆ. ಈಗಿನದ್ದು ಸಂಪೂರ್ಣವಾಗಿ ಹೊಸತಾದ ಯುಗ, ಜಾಗತಿಕ ಮಟ್ಟದಲ್ಲಿ ಸಮಾಜವಾದದೆಡೆಗೆ ಪರಿವರ್ತನೆಯ ಯುಗ.

ಮಾರ್ಕ್ಸ್‌ವಾದಿಗಳು ಯುದ್ಧಕೋರರು, ಯಾಕೆಂದರೆ ಯುದ್ಧಗಳ ಮುಖಾಂತರ ಸಾಮಾಜಿಕ ಕ್ರಾಂತಿಯನ್ನು ಅವರು ನಿರೀಕ್ಷಿಸುತ್ತಾರೆ ಎಂದು ಆರೋಪ, ನಿಂದನೆ ಹೊರಿಸಲಾಗುತ್ತಿದೆ. ಈ ಬಗ್ಗೆ ಸರಿಯಾದ ಮಾಹಿತಿನೀಡಲು ಎಂಗೆಲ್ಸ್ 1888ರಲ್ಲಿ ಈ ಬಗ್ಗೆ ಬರೆದ ಕೆಲವು ಹೇಳಿಕೆಗಳನ್ನು ಉದಾಹರಣೆಯಾಗಿ ತೆಗೆದುಕೊಳ್ಳೋಣ.

"ಒಂದು ಯುದ್ಧ ನಮ್ಮನ್ನು ಹಲವು ವರ್ಷಗಳಷ್ಟು ಹಿಂದಕ್ಕೊಯ್ಯುತ್ತದೆ. ಸಂಕುಚಿತ ವಾದವೆಂಬುದು ಎಲ್ಲವನ್ನೂ ನುಂಗಿಹಾಕುತ್ತದೆ. ಯಾಕೆಂದರೆ ಅದಾಗ ಉಳಿವಿಗಾಗಿ ನಡೆಸುವ ಹೋರಾಟವಾಗುತ್ತದೆ. ಜರ್ಮನಿ ಸುಮಾರು 50 ಲಕ್ಷ ಸಶಸ್ತ್ರ ಜನಗಳನ್ನು ಅಥವಾ ಜನಸಂಖ್ಯೆಯ 10 ಶೇಖಡಾ ಯುದ್ಧ ಭೂಮಿಗಿಳಿಸುತ್ತದೆ, ಇತರರು 4 ಅಥವಾ 5 ಶೇಕಡಾ ಇಳಿಸುತ್ತಾರೆ, ರಷ್ಯಾ ಸ್ವಲ್ಪ ಕಮ್ಮಿ ಇಳಿಸಬಹುದು. ಒಟ್ಟು ಸುಮಾರು ಒಂದರಿಂದ ಒಂದೂವರೆ ಕೋಟಿ ಸೈನಿಕರು ಇರುತ್ತಾರೆ. ಇವರೆಲ್ಲರಿಗೆ ಆಹಾರ ಹೇಗೆ ಒದಗಿಸುತ್ತಾರೆ ಎಂದು ನೋಡಬೇಕು. ಮೂವತ್ತು ವರ್ಷಗಳ ಯುದ್ಧದಂತೆ ಇದೊಂದು ವಿಧ್ವಂಸವೇ.

"ಕೊನೆಯದಾಗಿ, ಜಾಗತಿಕ ಯುದ್ಧವಲ್ಲದೆ ಬೇರೆ ಯುದ್ಧ ಪ್ರಷ್ಯಾ-ಜರ್ಮನಿಗೆ ಸಾಧ್ಯವಿಲ್ಲ. ಜಾಗತಿಕ ಯುದ್ಧವೆಂದರೆ ಇದುವರೆಗೆ ಕನಸಿನಲ್ಲೂ ಕಾಣದಷ್ಟು ವ್ಯಾಪಕವಾದ ಹಿಂಸೆಯೇ 80 ಲಕ್ಷದಿಂದ ಒಂದು ಕೋಟಿ ಸೈನಿಕರು ಪರಸ್ಪರರ ಸಾಮೂಹಿಕ ಕಗ್ಗೊಲೆ ನಡೆಸುತ್ತಾರೆ. ಆ ಮೂಲಕ ಯಾವ ವಿಧ್ವಂಸಕ ವಿಷ ಜಂತುಗಳೂ ಎಂದೂ ಮಾಡಲಾರದಷ್ಟು ಸಮಸ್ತ ಯುರೋಪನ್ನು ನುಂಗಿ ಬರಡು ಮಾಡಿಬಿಡುತ್ತಾರೆ. ಮೂವತ್ತು ವರ್ಷಗಳ ಯುದ್ಧದ ವಿಧ್ವಂಸವನ್ನು ಮೂರು ಅಥವಾ ನಾಲ್ಕು ವರ್ಷಗಳ ಅಲ್ಪ ಕಾಲದೊಳಗೆ ಅದು ಮಾಟ್ಟಂತಾಗುತ್ತಿದೆ; ಯುರೋಪು ಖಂಡದಲ್ಲೆಲ್ಲಾ ಬರಗಾಲ, ಸಾಂಕ್ರಾಮಿಕ ರೋಗ ಮತ್ತು ವಿಪರೀತ ಯಾತನೆಗಳಿಂದಾಗಿ ಜನತೆ ಮತ್ತು ಸೈನಿಕರಲ್ಲಿ ಸಾರ್ವತ್ರಿಕವಾಗಿ ಸ್ಥೈರ್ಯ ಉಡುಗಿ ಹೋಗುತ್ತದೆ; ನಮ್ಮ ವ್ಯಾಪಾರ, ಕೈಗಾರಿಕೆ, ಸಾಲದ ಕೃತಕ ವ್ಯವಸ್ಥೆಯಲ್ಲಿ ಗೊಂದಲ, ಸಾರ್ವತ್ರಿಕ ದಿವಾಳಿ; ಹಳೆಯ ಪ್ರಭುತ್ವಗಳು ಹಾಗೂ ಅವರ ಬುದ್ಧಿಮತ್ತೆಯೆಲ್ಲಾ ಮುರಿದು ಬೀಳುತ್ತವೆ. ಎಷ್ಟರವರೆಗೆಂದರೆ ಡಜನ್‌ಗಟ್ಟಲೆ ಕಿರೀಟಗಳು ದಾರಿ ಬದಿಯಲ್ಲಿ ಉರುಳಾಡುತ್ತಿದ್ದರೆ ಅವನ್ನು ಹೆಕ್ಕಿಕೊಳ್ಳುವವರು ಯಾರೂ ಇರುವುದಿಲ್ಲ; ಇದೆಲ್ಲಾ ಹೇಗೆ ಕೊನೆಗೊಳ್ಳುತ್ತದೆ ಯಾರು ವಿಜಯಶಾಲಿಗಳಾಗುತ್ತಾರೆ ಎಂಬುದನ್ನು ಮುಂದಾಗಿ ಹೇಳುವುದೇ ಸಾಧ್ಯವಿಲ್ಲ; ಆದರೆ ಒಂದು ಮಾತ್ರ ಖಂಡಿತ ಸಾರ್ವತ್ರಿಕ ಪ್ರಯಾಸ ಮತ್ತು ಕಾರ್ಮಿಕ ವರ್ಗದ ಅಂತಿಮ ವಿಜಯಕ್ಕೆ ಅಗತ್ಯವಾದ ಸನ್ನಿವೇಶ ನಿರ್ಮಾಣಗೊಳ್ಳುತ್ತದೆ. ಶಸ್ತ್ರಾಸ್ತ್ರಗಳ ಪೈಪೋಟಿಯ ವ್ಯವಸ್ಥೆಯನ್ನು ಮಿತಿ ಮೀರಿ ಮುಂದೊತ್ತಿದಾಗ ಅದು ಅನಿವಾರ್ಯವಾದ ಫಲ ನೀಡುತ್ತದೆ ಎಂಬುದನ್ನಷ್ಟೆ ಪ್ರತೀಕ್ಷಿಸಬಹುದು. ನನ್ನ ಪ್ರಭುಗಳೇ, ರಾಜಕುಮಾರರೇ, ಮುತ್ಸದ್ದಿಗಳೇ, ನಿಮ್ಮ ಬುದ್ಧಿಮತ್ತೆ ಹಳೆಯ ಯುರೋಪನ್ನು ತಂದು ನಿಲ್ಲಿಸಿರುವುದು ಇಂತಹ ಸ್ಥಿತಿಗೆ."

ಪ್ರಸ್ತುತ ವೈರುಧ್ಯಗಳು

ಮಾರ್ಕ್ಸ್‌ರ ನಂತರದ ಕಾಲದಲ್ಲಿ ಮುಕ್ತ ಬಂಡವಾಳಶಾಹಿ ಗುತ್ತೇದಾರಿ ಬಂಡವಾಳಶಾಹಿಯಾಗಿ, ರಾಕ್ಷಸೀ ಸಾಮ್ರಾಜ್ಯಶಾಹಿಯಾಗಿ ಬೆಳೆದು ಬೂರ್ಜ್ವಾವರ್ಗ ಮತ್ತು ಕಾರ್ಮಿಕ ವರ್ಗದ ನಡುವಿನ "ಸರಳೀಕೃತ ವರ್ಗ ವೈಷಮ್ಯ"ಕ್ಕೆ ಹೊಸ ಹೊಸ ಸಾಮಾಜಿಕ ವೈರುಧ್ಯಗಳು, ವೈಷಮ್ಯಗಳು ಸೇರಿಕೊಳ್ಳುತ್ತಿವೆ. ಈ ಎಲ್ಲಾ ವೈರುಧ್ಯಗಳು ಸೇರಿ ಅವನತಿ ಹೊಂದುತ್ತಿರುವ ಬೂರ್ಜ್ವಾ ಸಮಾಜ ವ್ಯವಸ್ಥೆಯನ್ನು ಹಾಗೂ ಅದರ ಅಂತಿಮ ಪಳೆಯುಳಿಕೆಗಳನ್ನು ವಿಘಟನೆಯತ್ತ ತಳ್ಳುತ್ತಿವೆ; ಹೊಸದೊಂದು ಜಗದ್ವ್ಯಾಪಿ ಸಮಾಜವಾದಿ ಹಾಗೂ ಸಾಮ್ಯವಾದಿ ಸಮಾಜ ವ್ಯವಸ್ಥೆಯತ್ತ ತಳ್ಳುತ್ತಿವೆ. ಇದನ್ನು ತಡೆ ಹಿಡಿಯುವುದು ಸಾಧ್ಯವಿಲ್ಲ. ರಾಷ್ಟ್ರೀಯ ವಿಮೋಚನೆ ಮತ್ತು ಸಾಮ್ರಾಜ್ಯಶಾಹಿ ಶಕ್ತಿಗಳ ನಡುವಿನ ವೈರುಧ್ಯ ಜಾಗತಿಕ ಸಾಮ್ರಾಜ್ಯಶಾಹಿ ಶಕ್ತಿಗಳು ಮತ್ತು ಸಮಾಜವಾದಿ ಶಿಬಿರದ ದೇಶಗಳ ನಡುವಿನ ವೈರುಧ್ಯ ಎಲ್ಲವೂ ಇನ್ನೂ ಉಳಿದುಕೊಂಡಿರುವ ಬಂಡವಾಳಶಾಹಿಯ ಶಕ್ತಿಶಾಲಿ ಕೋಟೆಗಳನ್ನು ಮುತ್ತಿಗೆ ಹಾಕುತ್ತಿದೆ, ಅವನ್ನು ಬುಡಮೇಲು ಮಾಡುತ್ತಿವೆ. ಜಾಗತಿಕ ಬಂಡವಾಳಶಾಹಿಯ ಚಿಪ್ಪು ಒಂದಿಲ್ಲೊಂದು ಸಮಯದಲ್ಲಿ ಊಹಿಸಿರಬಹುದಾದುದಕ್ಕಿಂತ ಹೆಚ್ಚು ಗಟ್ಟಿಯಾಗಿದೆ ಎಂಬುದು ನಿಜ.

ಇವೆಲ್ಲಾ ಮಾರ್ಕ್ಸ್‌ವಾದಿ ಸಿದ್ಧಾಂತದ ಸತ್ಯತೆಯನ್ನೂ, ಅದರ ವೈಜ್ಞಾನಿಕತೆಯನ್ನು ದೃಢಪಡಿಸುತ್ತಿವೆಯಲ್ಲವೆ ಮತ್ತೇನು ?

ಕೆಲವು ಸಿನಿಕರು ಜಾಗತಿಕ ಕಮ್ಯೂನಿಸ್ಟ್ ಆಂದೋಲನದಲ್ಲಿ ಕಂಡು ಬರುತ್ತಿರುವ ದೌರ್ಬಲ್ಯಗಳು, ಕೊರತೆಗಳು ಹಾಗೂ ಎಡ ಚ್ಯುತಿಯ ಕಡೆಗೆ ಬೆರಳು ತೋರಿಸುತ್ತಾ ಅದರಿಂದ ಸಮಾಧಾನ ಪಡೆಯುತ್ತಾರೆ; "ಕೈಗಾರಿಕಾಭಿವೃದ್ಧಿ ಹೊಂದಿದ ಯಾವುದೇ ದೇಶದಲ್ಲಿ ಇದುವರೆಗೆ ಕಾರ್ಮಿಕವರ್ಗದ ಕ್ರಾಂತಿ ನಡೆದಿಲ್ಲ, ನಿಕಟ ಭವಿಷ್ಯದಲ್ಲಿ ನಡೆಯುವ ಸೂಚನೆಯೂ ಇಲ್ಲ" ವಾದ್ದರಿಂದ ಮಾರ್ಕ್ಸ್‌ವಾದ ಸಂಪೂರ್ಣವಾಗಿ ತಪ್ಪೆಂದು ಸಿದ್ಧಗೊಂಡಿದೆ ಎಂದು ಘೋಷಿಸುತ್ತಾರೆ. ಇನ್ನು ಕೆಲವರು ಇವರಿಗಿಂತ "ಜಾಣ"ರೆಂದು ತೋರಿಸಿಕೊಳ್ಳ ಬಯಸುತ್ತಾರೆ. ವಾಸ್ತವವಾಗಿ "ಮಾನವ ಸಮಾಜವನ್ನು ತಂತ್ರಜ್ಞಾನ ಮತ್ತು ಆರ್ಥಿಕತೆಯ ರಚನಾತ್ಮಕ ಉಪಯೋಗ ಪಡೆಯಲು ಸಾಧ್ಯವಾಗುವಂತೆ ಪುನಸ್ಸಂಘಟಿಸಬೇಕು. ಯಾಕೆಂದರೆ ಪ್ರಮುಖವಾದ ವೈರುಧ್ಯಗಳು ಇರುವುದು ಒಂದೆಡೆ ಬಂಡವಾಳ ಇನ್ನೊಂದೆಡೆ ಮಾನವಿಕತೆಯ ನಡುವೆಯೇ ಹೊರತು ಮಾರ್ಕ್ಸ್ ಹೇಳಿದಂತೆ ಬೂರ್ಜ್ವಾವರ್ಗ ಮತ್ತು ಮತ್ತು ಕಾರ್ಮಿಕವರ್ಗದ ನಡುವೆ ಅಲ್ಲ", ಆದ್ದರಿಂದಲೇ ಮಾರ್ಕ್ಸ್‌ರ ವಿಚಾರ ತಪ್ಪೆಂದು ಸಿದ್ಧಗೊಂಡಿತು ಎಂಬುದು ಈ "ಜಾಣ"ರ ಅಂಬೋಣ.

ಇನ್ನು ಕೆಲವು ಬೂರ್ಜ್ವಾ, ಪೆಟ್ಟಿ-ಬೂರ್ಜ್ವಾ ಬೌದ್ಧಿಕ ಪ್ರೌಢ ಪ್ರತಾಪಿಗಳಿದ್ದಾರೆ. ಮಾರ್ಕ್ಸ್‌ವಾದೀ ಸಿದ್ಧಾಂತದ ಮೇಲಿನ ಪ್ರಾವೀಣ್ಯತೆ ಹಾಗೂ ಏಕಸ್ವಾಮ್ಯವನ್ನು ತಮ್ಮ ಮೇಲೇನೇ ಆರೋಪಿಸಿಕೊಂಡು ಮಾರ್ಕ್ಸ್‌ವಾದಿ ಪಕ್ಷಗಳು ಮತ್ತು ಅವುಗಳ ಸದಸ್ಯರ ಬಗ್ಗೆ ಕೀಳಾಗಿ ಮಾತನಾಡುತ್ತಾರಿವರು ಮಾರ್ಕ್ಸ್‌ವಾದದ ಬಗ್ಗೆ ತಮ್ಮಷ್ಟು "ಸರ್ವವ್ಯಾಪಿ" ಜ್ಞಾನ ಈ ಪಕ್ಷಗಳಿಗೆ, ಸದಸ್ಯರಿಗೆ ಇಲ್ಲ, ಆದ್ದರಿಂದ ಅವರು "ನಿಜವಾದ" ಮಾರ್ಕ್ಸ್‌ವಾದಿಗಳಲ್ಲ ಎಂದು ಹೇಳುತ್ತಾರೆ ಇವರು ! ವರ್ಗ ಹೋರಾಟ, ಕಾರ್ಮಿಕವರ್ಗದ ಆಳ್ವಿಕೆ, ಸಮಾಜವಾದ ಮತ್ತು ಕಮ್ಯೂನಿಸಂ ಕುರಿತಾದ ಮಾರ್ಕ್ಸ್‌ರ ಬೋಧೆಗಳನ್ನು ಕಾರ್ಯರೂಪಕ್ಕಿಳಿಸಲು ಒಂದು ಕಿರುಬೆರಳನ್ನೂ ಎತ್ತದ ತಕ್ಕ ಮಾರ್ಕ್ಸ್‌ವಾದಿಗಳಿವರು. ಮಾನವ ಕುಲದ ಮೂರನೇ ಒಂದು ಭಾಗದ ವಿವಿಧ ದೇಶಗಳಲ್ಲಿ ವಿವಿಧ ಘಟ್ಟಗಳಲ್ಲಿ ಸಮಾಜವಾದವನ್ನು

(ಮುಂದಿನ ಪುಟ ನೋಡಿ)

ಜನರ ಸಮಸ್ಯೆಗಳನ್ನು ಉಲ್ಲೇಖಿಸದ ರಾಷ್ಟ್ರಾಧ್ಯಕ್ಷರ ಭಾಷಣ

ಲೋಕಸಭೆಯಲ್ಲಿ ರಾಷ್ಟ್ರಾಧ್ಯಕ್ಷರು ಮಾಡಿರುವ ಭಾಷಣ ಓದಿದರೆ ಅದು ಯಾವುದೋ ಬೇರೆ ದೇಶಕ್ಕೆ ಸಂಬಂಧ ಪಟ್ಟಿಂತಿದೆಂದೂ, ಕಾರ್ಮಿಕ, ರೈತ, ಕೃಷಿ ಕಾರ್ಮಿಕ ಹಾಗೆಯೇ ಇತರ ದುಡಿಯುವ ವರ್ಗದ ಪರಿಸ್ಥಿತಿ ಭಾಷಣದಲ್ಲಿ ಚಿತ್ರಿಸಿದ್ದಕ್ಕಿಂತ ವ್ಯತಿರಿಕ್ತವಾಗಿದೇ. ನಿರುದ್ಯೋಗ, ಬಡತನದ ಸಮಸ್ಯೆ ಎಂಬುದೆ ದೇಶದಲ್ಲಿಲ್ಲ. ಈ ಸಲ ಉತ್ತಮ ಬೆಳೆ ಬಂದಿರುವುದರಿಂದ ಅತಿಪ್ರಸರಣ, ಬೆಲೆಯೇರಿಕೆ ಸಂಬಂಧ ಕೂಡ ಚಿಂತಿಸುವ ಕಾರಣವಿಲ್ಲೆಂಬ ಸುಂದರ ಚಿತ್ರವನ್ನು ದೇಶದ ಮುಂದಿರಿಸಲಾಗಿದೆಂದು ಸಿಪಿಐ (ಎಂ) ರಾಜ್ಯ ಸಭೆ ಸದಸ್ಯ ಹರಿಕಿಶನ್ ಸಿಂಗ್ ಸೂರಜಿತ್ ಅವರು ಲೋಕ ಸಭೆಯಲ್ಲಿ ಭಾಷಣ ಮಾಡುತ್ತಾ ಜೈಲ್‌ಸಿಂಗ್ ಅವರ ಭಾಷಣವನ್ನು ಕಟುವಾಗಿ ಟೀಕಿಸಿದರು.

ದೇಶದಲ್ಲಿ ಆರ್ಥಿಕ ಬಿಕ್ಕಟ್ಟು ತೀವ್ರವಾಗುತ್ತಿದೆಂದೂ, ಬೆಳವಣಿಗೆ ಕುಂಠಿತಗೊಳ್ಳುತ್ತಿದೆಂದೂ, ಬಡತನ ಆಳವಾಗುತ್ತಿದೆಂದೂ, ನಿರುದ್ಯೋಗ ಮತ್ತು ಕಷ್ಟಕಾರ್ಪಣ್ಯಗಳು ಹೆಚ್ಚುತ್ತಿವೆಯೆಂದೂ ಬಂಡವಾಳಶಾಹಿ ಪತ್ರಿಕೆಗಳೇ ತಮ್ಮ ಆತಂಕ ತೋರ್ಪಡಿಸುತ್ತಿವೆಯೆಂದೂ ಅವರು ಹೇಳಿದರು.

ಬಡತನವನ್ನು ನಿವಾರಿಸುವ ಗುರಿ ಮುಟ್ಟಿದ್ದೇವೆಂದು ಹೇಳಿರುವುದು ಅಪ್ಪಟ ಸುಳ್ಳೆಂದೂ, ಸರ್ಕಾರಿ ಪ್ರಕಟಣೆ ಪ್ರಕಾರ ಉದ್ಯೋಗ ಒದಗಿಸುವ ಕ್ರಮಗಳೇ ಕಡಿಮೆಯಾಗಿವೆಯೆಂದೂ, 1978 ರಲ್ಲಿದ್ದ ಒಟ್ಟು ನಿರುದ್ಯೋಗಿಗಳ ಸಂಖ್ಯೆಗೆ ಹೋಲಿಸಿದರೆ ಇತ್ತೀಚಿನ ವರ್ಷಗಳ ನಿರುದ್ಯೋಗಿಗಳಿಗೆ ಉದ್ಯೋಗ ಒದಗಿಸುವ ಕಾರ್ಯಕ್ರಮ ಶೇ 6ರಷ್ಟು ಇಳಿಮುಖವಾಗಿದೆಂದು ತೋರುತ್ತದೆಂದೂ, ಬಡತನದ ರೇಖೆಯನ್ನು ಶೇ 50 ರಿಂದ ಶೇ 30 ಕ್ಕೆ ಇಳಿಸುವ ಕಾರ್ಯವೂ ವಿಫಲಗೊಂಡಿದೆಂದು ಸೂರಜಿತ್ ಹೇಳಿದ್ದಾರೆ. ಭಾರತದಂತ ದೇಶದಲ್ಲಿ ಬಡತನ ಹಾಗೂ ನಿರುದ್ಯೋಗ ನಿವಾರಣೆಯಾಗ ಬೇಕಾದರೆ ಭೂಮಿಯ ಗುತ್ತೇದಾರಿ ತೆಗೆದುಹಾಕಲೇ ಬೇಕೆಂದೂ ಆದರೆ ರಾಷ್ಟ್ರಾಧ್ಯಕ್ಷರ ಭಾಷಣ ಈ ವಿಷಯವನ್ನೇ ಬಿಟ್ಟಿರುವುದಿಲ್ಲೆಂದೂ ಆಪಾದಿಸಿದ್ದಾರೆ.

ಒಂದು ಕುಟುಂಬದ ಹಿಡುವಳಿ ಮಿತಿ 20 ಎಕ್ರೆ ಎಂದು ಪರಿಗಣಿಸಿದರೆ 2 ವರ್ಷಗಳಲ್ಲಿ ಹಂಚಲು 630 ಕೋಟಿ ಎಕ್ರೆ ಭೂಮಿ ಒದಗಿಸಲಾಗುವುದೆಂದು 1969 ರಲ್ಲೇ ಹೇಳಲಾಗಿತ್ತು. 630 ಕೋಟಿಯಲ್ಲಿ 400 ಕೋಟಿ ಎಕ್ರೆ ಲಭ್ಯಗೊಳಿಸಲಾಗುವುದೆಂದು ಆಗಿನ ಒಕ್ಕಲತನದ ಮಂತ್ರಿ ಒಪ್ಪಿಕೊಂಡಿದ್ದರು. ಆಳುವ ಕಾಂಗ್ರೆಸ್ಸಿನವರು ಎಷ್ಟು ಪ್ರಚಾರ ಮಾಡಿದರೂ ಕೂಡ 43 ಲಕ್ಷ ಎಕ್ರೆ, ಭೂಮಿಯಷ್ಟೇ ಹೆಚ್ಚುವರಿ ಭೂಮಿಯೆಂದು ಸಾರಲಾಗಿದೆ. ಇದರ ಪೈಕಿ 29 ಲಕ್ಷ ಎಕ್ರೆ ಈಗಾಗಲೇ ವಶಪಡಿಸಿಕೊಳ್ಳಲಾಗಿದೆ. ಇದರ ಪೈಕಿ 20 ಲಕ್ಷ ಎಕ್ರೆ, ಮಾತ್ರ ಹಂಚಲಾಗಿದೆಂದೂ ಸೂರಜಿತ್ ಹೇಳಿದರು.

ಭೂ ಸುಧಾರಣ ಕಾಯಿದೆಯಲ್ಲಿ ತಿದ್ದುಪಡಿ ಮಾಡಿದರೆ 180 ಲಕ್ಷ ಎಕ್ರೆ ಭೂಮಿಯಿಲ್ಲದವರಿಗೆ ಹಂಚಲು ಸಿಗುತ್ತದೆಂದು 6ನೇ ಪಂಚವಾರ್ಷಿಕ ಯೋಜನೆಯ ದಸ್ತಾವೇಜು ತೋರಿಸಿಕೊಡುತ್ತದೆ. ಕಾಂಗ್ರೆಸ್ ಸರಕಾರ ಭೂ ಮಸೂದೆಯುಲ್ಲಿರುವ ಈ ಕೊರತೆಗಳನ್ನು ನೀಗಿಸಲು ಯಾವದೇ ಕ್ರಮ ತೆಗೆದುಕೊಂಡಿಲ್ಲ, ಅಷ್ಟೇ ಅಲ್ಲ ಕಳೆದ ಎರಡೂವರೆ ವರ್ಷಗಳ ಹಿಂದೆಯೇ ಪಶ್ಚಿಮ ಬಂಗಾಲ ಸರಕಾರ ಅಂಥ ಕೊರತೆಗಳನ್ನು ತೆಗೆದು ಹಾಕಿರುವ ಮಸೂದೆಯನ್ನು ಮಂಜೂರ ಮಾಡಿದ್ದರೂ ಕೂಡ ಕೇಂದ್ರ ಸರಕಾರ ಅದನ್ನು ತಡೆ ಹಿಡಿದಿದೆ. ಕಾಂಗ್ರೆ ಮತ್ತು ಪಶ್ಚಿಮ ಬಂಗಾಲದ ಎಡರಂಗ ಸರಕಾರಕ್ಕಿರುವ ವ್ಯತ್ಯಾಸವನ್ನು ಇದು ತೋರಿಸಿ ಕೊಡುತ್ತದೆ. ರೈತರಿಗೆ ಭೂಮಿ ಹಕ್ಕು ಕೊಡಿಸುವ ಮತ್ತು 3/4 ಅಥವಾ 3/5ನೇ ಪಾಲನ್ನು ಭೂಮಿ ಉಳುವವನಿಗೆ ಕೊಡಿಸುವ ಕಾನೂನು ಇದೆಂದು ಕಾಂಗ್ರೆಸ್ಸಿನವರು 1970 ರಿಂದಲೂ ಘೋಷಿಸುತ್ತಿದ್ದರೂ ಕೂಡ, ಸರಿಯಾದ ಭೂಮಿಯ ಖಾತೆಯ ಕಾಗದ ಪತ್ರ ಇಲ್ಲದಿರುವುದರಿಂದಲೂ, ಮತ್ತು ಕಾಂಗ್ರೆಸ್ಸಿನಲ್ಲಿ ಭೂ ಮಾಲಿಕರ ಪ್ರಭಾವ ಹೆಚ್ಚಾಗಿರುವುದರಿಂದ ಅಂಥ ಕಾಗದ ಪತ್ರಗಳನ್ನು ತಿದ್ದುವ ಅವಕಾಶ ವಿಲ್ಲದಿರುವುದರಿಂದಲೂ ದೇಶದ ಯಾವ ರಾಜ್ಯದಲ್ಲೂ ಕೂಡ ಇಂಥ ಕಾನೂನನ್ನು ಜಾರಿಯಲ್ಲಿ ತಂದಿರುವುದಿಲ್ಲ. ಆದರೆ ಪಶ್ಚಿಮ ಬಂಗಾಲ ಸರಕಾರ ಮಾತ್ರ "ಬರ್ಗಾ ಚಳುವಳಿಯ" ಮೂಲಕ ಈ ಕಾರ್ಯದಲ್ಲಿ ಸ್ವಲ್ಪ ಯಶಸ್ಸು ಪಡೆದಿದೆ.

ರೈತರ ಸಮಸ್ಯೆ ಕುರಿತು ವಿವರಿಸುತ್ತಾ, ತನ್ನ ಬಿಕ್ಕಟ್ಟಿನ ಭಾರವನ್ನು ಸರಕಾರ ರೈತರ ಮೇಲೆ ಹೇರಲು ಪ್ರಯತ್ನಿಸುತ್ತಿದೆಂದು ಆರೋಪಿಸಿದ್ದಾರೆ. ಉರವಲು ಕಟ್ಟಿಗೆಗಿಂತಲೂ ಅಗ್ಗದರದಲ್ಲಿ ಕಬ್ಬು ಮಾರಾಟ ಮಾಡಲಾಗುತ್ತಿದೆ. ಸಕ್ಕರೆ ಕಾರ್ಖಾನೆಗಳಿಗೆ ಸಾಕಷ್ಟು ಸಾಲ ಒದಗಿಸುತ್ತಿರುವಾಗ ರೈತರಿಗೆ ಅದು ಲಭ್ಯವಾಗುತ್ತಿಲ್ಲ. ರಾಜಸ್ತಾನ, ಹರ್ಯಾಣಾ, ಪಂಜಾಬಿನ ಹತ್ತಿ ಬೆಳೆಗಾರರಿಗೆ, ಬೆಳೆ ಹಾಳಾಗಿ ರೂ. 1000 ಕೋಟಿ ಹಾನಿಯಾಗಿದೆ. ಆದರೆ ಸರಕಾರ ಅವರಿಗೆ ಬರೇ ರೂ. 10 ಕೋಟಿ ಕೊಟ್ಟಿದೆ, ಬೆಳೆ ವಿಮೆಗಾಗಿ ಯಾವ ಕ್ರಮ ಕೈಗೊಂಡಿಲ್ಲ.

ರಸಗೊಬ್ಬರ, ನೀರಾವರಿ, ವಿದ್ಯುಚ್ಛಕ್ತಿ ದರಗಳೆಲ್ಲ ಹೆಚ್ಚಾಗಿರುವಾಗ ಗೋದಿಗೆ ಬರೇ ಒಂದು ರೂಪಾಯಿ ಜಾಸ್ತಿ ಮಾಡಿರುವುದನ್ನು ಸೂರಜಿತ್ ಅವರು ಟೀಕಿಸಿದ್ದಾರೆ.

ಮುಂಬಯಿ ಬಟ್ಟೆ ಗಿರಣಿ ಕೆಲಸಗಾರರ, ನಾವಿಕ ಕೆಲಸಗಾರರ ಮುಷ್ಕರಗಳ ಕುರಿತು ಚಕಾರ ಎತ್ತದಿರುವುದನ್ನೂ ಖಂಡಿಸಿದ್ದಾರೆ.

ಹರಿಜನರ ಮೇಲೆ ನಡೆಯುತ್ತಿರುವ ಅತ್ಯಾಚಾರಗಳ ಕುರಿತು ಗಮನ ಸೆಳೆಯುತ್ತ ಈ ವರ್ಷದ ಪೂರ್ವಾರ್ಧದಲ್ಲಿ 16 ರಾಜ್ಯಗಳಲ್ಲಿ 4156 ಅತ್ಯಾಚಾರಗಳ ನಡೆದಿವೆಯೆಂದೂ, ಇವುಗಳ ಪೈಕಿ ರಾಜಸ್ತಾನ, ಬಿಹಾರ, ಮಧ್ಯಪ್ರದೇಶ, ಉತ್ತರ ಪ್ರದೇಶಗಳಲ್ಲಿಯೇ 3328 ಅತ್ಯಾಚಾರಗಳಾಗಿವೆಯೆಂದು ಹೇಳಿದ್ದಾರೆ. ಭೂ ಸುಧಾರಣೆ ಹಾಗೂ ಕೂಲಿ-ಕುರಿತು ಸರಕಾರ ಸರಿಯಾದ ಧೋರಣೆ ಅನುಸರಿಸದಿರುವುದರಿಂದ ಇಂಥ ಅತ್ಯಾಚಾರಗಳು ನಡೆಯುಲಿಕ್ಕೆ ಮುಖ್ಯ ಕಾರಣವೆಂದು ಹೇಳಿದ್ದಾರೆ.

ಆರ್ಥಿಕ ಪರಿಸ್ಥಿತಿಯಿಂದಾಗಿ ಜನರಲ್ಲಿ ಉಂಟಾಗಿರುವ ಅಸಮಾಧಾನ ಮತ್ತು ಹೆಚ್ಚುತ್ತಿರುವ ಛಿದ್ರಕಾರಿ, ಜಾತೀಯ ಶಕ್ತಿಗಳ ಚಟುವಟಿಕೆಗಳ ಕುರಿತೂ ಸೂರ್ಜಿತ್ ಅವರು ವಿವರಿಸಿದರು. ಹಿಂದೂ, ಸಿಖ್, ಮುಸ್ಲಿಂ ಜಾತೀವಾದಿಗಳ ಪ್ರಚಾರಕ್ಕೆ ಜನತೆ ಬಲಿಯಾಗುತ್ತಿರುವಾಗ, ಇದರ ವಿರುದ್ಧ ದೇಶಪ್ರೇಮದ, ಜಾತ್ಯಾತೀತತೆಯ ಭಾವೈಕ್ಯತೆಯ ಕುರಿತು ಪರಿಣಾಮಕಾರಿ ಪ್ರಚಾರ ಮಾಡುವಲ್ಲಿ ಸರಕಾರ ವಿಫಲಗೊಂಡಿದೆ. ಜಾತೀಯ ಸೌಹಾರ್ದತೆಗೆ, ಹಿಂದೂ, ಮುಸ್ಲಿಂ, ಸಿಖ್, ಯಾವದೇ ಮೂಲೆಯಿಂದ ಗಂಡಾಂತರ ಬಂದರೂ ಕೂಡ ಅದು ರಾಷ್ಟ್ರೀಯ ಚಳುವಳಿಯಲ್ಲಿ ನಾವು ಗಳಿಸಿದ ಮೌಲ್ಯಗಳ ನಿರಾಕರಣೆಯಾಗುತ್ತದೆ. ದೇಶಪ್ರೇಮ ಮತ್ತು ಜಾತ್ಯಾತೀತತೆಯ ಗೌರವವನ್ನು ಮೇಲೆತ್ತಿ ಹಿಡಿಯಬೇಕಾಗಿರುವ ಈ ಸಂಧಿಕಾಲದಲ್ಲಿ ರಾಷ್ಟ್ರಾಧ್ಯಕ್ಷರು ಅದರ ಕುರಿತು ಏನೂ ಹೇಳದಿರುವುದರ ಕುರಿತು ಸೂರಜಿತ್ ಅವರು ದುಃಖ ವ್ಯಕ್ತ ಮಾಡಿದರು.

(4ನೇ ಪುಟದಿಂದ)

ಕಟ್ಟುತ್ತಿರುವುದು "ಸೋವಿಯತ್ ಮಾರ್ಕ್ಸ್‌ವಾದಿ ಸ್ಫೂರ್ತಿ ದೇವತೆ"ಗಳ ಈ ಕೊಡುಗೆಯಿಂದಾಗಿಯೋ ಅಥವಾ ತಮ್ಮೆಲ್ಲಾ ವಿಫಲತೆ, ದೌರ್ಬಲ್ಯ ಹಾಗೂ ಯಶಸ್ಸುಗಳೊಂದಿಗೆ ದೃಢ ಮನಸ್ಸಿನಿಂದ ದುಡಿದ ಜಗತ್ತಿನ ಕೋಟಿಗಟ್ಟಲೆ ಸಾಮಾನ್ಯ ಕಾರ್ಮಿಕರು, ರೈತರು ಮತ್ತು ಕಮ್ಯೂನಿಸ್ಟ್ ಮತ್ತು ಕಾರ್ಮಿಕ ಪಕ್ಷಗಳಿಂದಾಗಿಯೋ ?

ಗೊಡ್ಡು ಸಿದ್ಧಾಂತವಲ್ಲ

ತಮ್ಮದು ಗೊಡ್ಡು ಸಿದ್ಧಾಂತವಲ್ಲ, ವಿಕಾಸದ ಒಂದು ಪ್ರಕ್ರಿಯೆಯ ಹಾಗೂ ಅದು ಯಾವ ಘಟ್ಟಗಳ ಮೂಲಕ ಹಾದು ಹೋಗುತ್ತದೆ ಎಂಬುದರ ಪ್ರತಿಪಾದನೆ ಎಂಬ ಸತ್ಯವನ್ನು ಮಾರ್ಕ್ಸ್ ಮತ್ತು ಎಂಗೆಲ್ಸ್ ದಣಿವಿಲ್ಲದಂತೆ ಬಾರಿಬಾರಿಗೂ ಹೇಳುತ್ತಿದ್ದರು. "ಮಾರ್ಕ್ಸ್‌ವಾದೀ ಸಿದ್ಧಾಂತವನ್ನು ಒಂದು ಶುಷ್ಕ ಪಾಂಡಿತ್ಯವಾಗಿ, ಅಂಥ ದೃಷ್ಟಿಯಿಂದ" ಕಾಣುವವರನ್ನು, "ಅದನ್ನು ಕಂಠಪಾಠ ಮಾಡಿದರೆ ಉಳಿದೆಲ್ಲಾ ಅವಶ್ಯಕತೆಗಳು ತಾವಾಗಿ ಪೂರೈಸಿದಂತಾಗುತ್ತದೆ" ಎಂದು ಭಾವಿಸಿ ಅದನ್ನು "ಕಾರ್ಯಾಚರಣೆಗೆ ಒಂದು ಮಾರ್ಗದರ್ಶಿಯೆಂದು ಕಾಣದೆ ಒಂದು ಪಂಥವನ್ನಾಗಿ ಮಾಡಿ ಬಿಟ್ಟವರಿಗೆ" ಮಾರ್ಕ್ಸ್ ಮತ್ತು ಎಂಗೆಲ್ಸ್ ಸದಾ ಛೀಮಾರಿ ಹಾಕುತ್ತಿದ್ದರು.

ಹೀಗಿದ್ದರೂ ಮಾರ್ಕ್ಸ್‌ವಾದವನ್ನು ಒಂದು ಗೊಡ್ಡು ಸಿದ್ಧಾಂತದ ಮಟ್ಟಕ್ಕೆ ಇಳಿಸುವವರನ್ನು ಕಾಣುತ್ತಿದೇವೆ; ಅದನ್ನು ಸೃಜನಾತ್ಮಕವಾಗಿ ಬೆಳೆಸುತ್ತೇವೆ ಎಂದು ಹೇಳಿಕೊಂಡು ನಿಸ್ಸತ್ವಗೊಳಿಸುವವರನ್ನೂ ಕಾಣುತ್ತಿದ್ದೇವೆ. ಇವುಗಳ ವಿರುದ್ಧ ಹೋರಾಟ ಬಹು ಕಷ್ಟ ಎಂಬುದು ನಿಜ. ಆದರೆ ಈ ಹೋರಾಟ ನಡೆಸುವುದು ಪ್ರತಿಯೊಬ್ಬ ಸಾಚಾ ಮಾರ್ಕ್ಸ್‌ವಾದಿಯ ಆದ್ಯ ಕರ್ತವ್ಯ.

ಅಂತರಾಷ್ಟ್ರೀಯ ಕಮ್ಯೂನಿಸ್ಟ್ ಚಳುವಳಿಯಲ್ಲಿ, ಸಮಾಜವಾದದ ದೇಶಗಳಲ್ಲಿ ಇನ್ನೂ ಪರಿಹಾರ ಕಾಣದ ಹಲವು ಸಮಸ್ಯೆಗಳಿವೆಯೆಂಬುದು ನಿಜ. ಇವು ಭಿನ್ನಾಭಿಪ್ರಾಯಗಳು, ಘರ್ಷಣೆಗಳು, ವೈರುಧ್ಯಗಳು ಮತ್ತು ಕೆಲವೊಮ್ಮೆ ವಿಭಜನೆಯ ರೂಪದಲ್ಲಿ ಕೂಡಾ ವ್ಯಕ್ತಗೊಳ್ಳುತ್ತವೆ. ಇದಕ್ಕೆ ಕಾರಣಗಳೇವೆ; ಜಾಗತಿಕ ಆಂದೋಲನದ ಬೆಳವಣಿಗೆಯ ಸಮಸ್ಯೆಗಳು; ಕೆಲವೊಮ್ಮೆ ಅವು ವೈಷಮ್ಯದ ರೂಪ ಪಡೆಯುತ್ತವೇ. ಅವನ್ನು ಸರಿಯಾಗಿ ವಿಶ್ಲೇಷಿಸಬೇಕಾಗಿದೆ. ಇವನ್ನೆಲ್ಲಾ ಜಾಗತಿಕ ಮಟ್ಟದಲ್ಲಿ ಸಮಾಜವಾದದ ವಿಜಯದ ಅತ್ಯಂತ ತೀವ್ರ ಕ್ಷಣದಲ್ಲಿ ಹೊಸ ಸಮಾಜವೊಂದರ ಜನನ ಶೂಲೆಯೆಂದು ಪರಿಗಣಿಸಿ ಈ ಎಲ್ಲಾ ತೊಂದರೆಗಳನ್ನು ನಿವಾರಿಸಲು ಮಾರ್ಗೋಪಾಯಗಳನ್ನು ರೂಪಿಸಬೇಕಾಗಿದೆ.

ಮಾರ್ಚ್ 1983 ರಿಂದ ಮಾರ್ಚ್ 1984 ರ ಅವಧಿಯಲ್ಲಿ ಜಗತ್ತಿನಾದ್ಯಂತ ಮಾರ್ಕ್ಸ್‌ರ ಮರಣ ಶತಾಬ್ದಿಯನ್ನಾಚರಿಸಲಾಯ್ತು. 1983 ರ ಮೇ ತಿಂಗಳಲ್ಲಿ ಅತನ 165 ನೇ ಜನ್ಮ ದಿನೋತ್ಸವವನ್ನೂ ಜಗತ್ತು ಆಚರಿಸಿತು. ಜಗತ್ತಿನ ಒಂದು ಭಾಗದಲ್ಲಿ ವಿಜಯಶಾಲಿಯಾಗಿರುವ ಮಾರ್ಕ್ಸ್‌ವಾದ ಜಾಗತಿಕ ಮಟ್ಟದಲ್ಲಿ ವಿಜಯಶಾಲಿಯಾಗುವ ಹೊತ್ತಿಲ್ಲದೆ.

ಮಾರ್ಕ್ಸ್‌ರ ಮರಣ ಶತಾಬ್ದಿಯ ಸಂದರ್ಭದ ಈ ಲೇಖನವನ್ನು ಮುಗಿಸುವ ಮೊದಲು ಮಾರ್ಕ್ಸ್ ಬಗ್ಗೆ ಎಂಗೆಲ್ಸ್ ಆಡಿರುವ ಈ ಮಾತುಗಳನ್ನು ಜ್ಞಾಪಿಸಿಕೊಳ್ಳುವುದು ಅತ್ಯಂತ ಸೂಕ್ತ.

'ಮಾರ್ಕ್ಸ್‌ರ ಜತೆಗೂಡಿ ದುಡಿದ 40 ವರ್ಷಗಳಲ್ಲಿ ಮತ್ತು ಅದಕ್ಕೂ ಮೊದಲು ಈ ಸಿದ್ಧಾಂತಕ್ಕೆ ಬುನಾದಿ ಹಾಕುವಲ್ಲಿ ಸ್ವಲ್ಪ ಮಟ್ಟಿಗೆ ನನ್ನ ಸ್ವತಂತ್ರ ಪಾಲು ಇತ್ತು, ವಿಶೇಷವಾಗಿ ಈ ಸಿದ್ಧಾಂತದ ನಿರೂಪಣೆಯಲ್ಲಿ ಇಷ್ಟೆಲ್ಲಾ ನನ್ನ ಕಾಣಿಕೆಗಳಿದ್ದರೂ ಕೂಡಾ, ಕೆಲವು ವಿಶೇಷ ಕ್ಷೇತ್ರಗಳಲ್ಲಿನ ನನ್ನ ಕೃತಿಗಳನ್ನು ಬಿಟ್ಟು ಉಳಿದಂತೆ ಮಾರ್ಕ್ಸ್ ಈಗ ಸಾಧಿಸಿರುವುದನ್ನು ನಾನಿಲ್ಲದೆಯೂ ಸಾಧಿಸಬಹುದಾಗಿತ್ತು. ಮಾರ್ಕ್ಸ್ ಏನನ್ನು ಈಡೇರಿಸಿದರೋ ಅದನ್ನು ಸಾಧಿಸುವುದು ನನಗೆ ಸಾಧ್ಯವಾಗುತ್ತಿರಲಿಲ್ಲ. ಮಾರ್ಕ್ಸ್‌ರ ನಿಲುವು ನಮ್ಮೆಲ್ಲರಿಗಿಂತಲೂ ಎತ್ತರದ್ದಾಗಿತ್ತು. ಅವರು ನಮ್ಮೆಲ್ಲರಿಗಿಂತ ದೂರದವರೆಗೆ ನೋಡಬಲ್ಲವರಾಗಿದ್ದರು ಮತ್ತು ನಮ್ಮೆಲ್ಲರಿಗಿಂತ ಶೀಘ್ರ ವ್ಯಾಪಕವಾಗಿ ಮತ್ತು ಶೀಘ್ರವಾಗಿ ನೋಡಬಲ್ಲವರಾಗಿದರು. ಮಾರ್ಕ್ಸ್ ಒಬ್ಬ ಮೇಧಾವಿ ನಾವು ಇತರರು ಸಾಧಾರಣ ಪ್ರತಿಭಾವಂತರು. ಅತನಿಲ್ಲದೆ ಈ ಸಿದ್ಧಾಂತ ಇಷ್ಟು ದೂರದವರೆಗೆ ಈಗಿರುವ ಮಟ್ಟಕ್ಕೆ ಬರುತ್ತಿರಲಿಲ್ಲ. ಆದ್ದರಿಂದ ಆ ಸಿದ್ಧಾಂತ ಆತನ ಹೆಸರು ಹೊಂದಿರುವುದು ಅತ್ಯಂತ ಸೂಕ್ತವೇ ಆಗಿದೆ." •

ಕೇರಳದ ಕಾಫಿ ಬೆಳೆಗಾರರ ಮತಪ್ರದರ್ಶನ

ಕೇರಳ ರಾಜ್ಯದಲ್ಲಿ ಒಟ್ಟು 52,362 ಕಾಫಿ ಬೆಳೆಗಾರರಿದ್ದು, ಅದರ ಪೈಕಿ ವೈನಾಡು ಒಂದೇ ಜಿಲ್ಲೆಯಲ್ಲಿ 49,036 ಬೆಳೆಗಾರರಿದ್ದಾರೆ. ತಾವು ಎದುರಿಸುತ್ತಿರುವ ಸಮಸ್ಯೆಗಳನ್ನು ಕಾಫಿ ಬೋರ್ಡಿಗೆ ಮನದಟ್ಟು ಮಾಡಿ ಕೊಡುವ ಸಲುವಾಗಿ ನೂರಾರು ಬೆಳೆಗಾರರು ಮಾರ್ಚ್ 12 ರಂದು ಬೆಂಗಳೂರಿಗೆ ಬಂದು ಕಾಫಿ ಬೋರ್ಡಿನ ಮುಂದೆ ಮತಪ್ರದರ್ಶನ-ಧರಣಿ, ನಡೆಸಿದರು. ಕಾಫಿ ಬೋರ್ಡಿನಲ್ಲಿ ಸಣ್ಣ ಬೆಳೆಗಾರರಿಗೆ ಹೆಚ್ಚಿನ ಪ್ರಾತಿನಿಧ್ಯ ಸಿಗಬೇಕೆಂದೂ, ಕಾನೂನಿನಲ್ಲಿ ಬದಲಾವಣೆಯಾಗಬೇಕೆಂದೂ, ಸರಕಾರದಿಂದ ಹೆಚ್ಚು ಧನ ಸಹಾಯ ಸಿಗಬೇಕೆಂದೂ ಇವರ ಬೇಡಿಕೆಗಳಲ್ಲಿವೆ. ಕೇರಳದ ಕರ್ಷಕ ಸಂಘದ ನಿರ್ಣಯದಂತೆ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಬೆಂಗಳೂರಿನಲ್ಲಿ ಪ್ರತಿಬಂಧಕಾಜ್ಞೆ ಇದ್ದುದರಿಂದ ಮೌನ ಮೆರವಣಿಗೆ ಹಾಗೂ ಧರಣಿ ನಡೆಸಲಾಯಿತು ಕರ್ನಾಟಕ ಸಿಐಟಿಯು ಇವರ ಧರಣಿಗೆ

[6ನೇ ಪುಟ ನೋಡಿ]

ಸಾರ್ವಜನಿಕ ಕ್ಷೇತ್ರದ ಆಡಳಿತದಲ್ಲಿ

ಕಾರ್ಮಿಕರ ಸಹಯೋಗಕ್ಕೆ ಹೊಸ ಯೋಜನೆ

— ಎಂ. ಕೆ. ಪಂಧೆ

ಕೇಂದ್ರ ಸಾರ್ವಜನಿಕ ಕ್ಷೇತ್ರದ ಉದ್ದಿಮೆಗಳಲ್ಲಿ ಕಾರ್ಮಿಕರ ಸಹಯೋಗ ಕುರಿತಂತೆ ಕೇಂದ್ರ ಕಾರ್ಮಿಕ ಇಲಾಖೆಯು ಹೊಸದೊಂದು ಯೋಜನೆಯನ್ನು ಘೋಷಿಸಿದೆ. ಇದೊಂದು ಸಮಗ್ರವಾದ ಯೋಜನೆಯೆಂದು ಸರ್ಕಾರ ಹೇಳಿದರೂ ಹಳೆಯ ಯೋಜನೆಗಳಿಗಿಂತ ತೀರ ಭಿನ್ನವಾಗಿಲ್ಲ. ಇದರ ಅನ್ವಯ ಕಾರ್ಮಿಕರ ಸಹಯೋಗ ಕೇವಲ ಸಾಂಕೇತಿಕವಾಗಿದ್ದು ಪ್ರದರ್ಶನದ ಬೊಂಬೆಯಂತಿರುತ್ತದೆ. ಮತ್ತು, ಅದನ್ನು ಪ್ರಸ್ತುತ ರೂಪದಲ್ಲೇ ಜಾರಿಗೆ ತಂದರೆ ಕಾರ್ಮಿಕರಲ್ಲಿ ಯಾವುದೇ ಉತ್ಸಾಹವನ್ನು ಹೊಮ್ಮಿಸುವುದಿಲ್ಲ.

ಮೊದಲನೆ 20 ಅಂಶದ ಕಾರ್ಯಕ್ರಮದಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರ ಸರ್ಕಾರ, ಆಡಳಿತದಲ್ಲಿ ಕಾರ್ಮಿಕರ ಸಹಯೋಗವನ್ನು ಒಂದು ಅಂಶವನ್ನಾಗಿ ಸೇರಿಸಿತ್ತು. ಈ ಅಂಶವನ್ನು ಕಾರ್ಮಿಕ ಚಳವಳಿಯು ವಿರೋಧಿಸಿತ್ತು. ಏಕೆಂದರೆ ಮೂಲತಃ ಈ ಯೋಜನೆಯು ಕಾರ್ಮಿಕರಿಗೆ ಹೆಚ್ಚಿನ ಅಧಿಕಾರವನ್ನು ನೀಡದೆ ಹೆಚ್ಚುವರಿ ಕೆಲಸದ ಹೊರೆಯನ್ನು ಹೊರಿಸುವುದಾಗಿತ್ತು. ಅಲ್ಲದೆ ಕಾರ್ಮಿಕ ಪ್ರತಿನಿಧಿಗಳೆಂದು ತನಗೆ ಬೇಕಾದವರನ್ನು ಸೂಚಿಸುವ ಅಧಿಕಾರವನ್ನೂ ಆಡಳಿತ ವರ್ಗಕ್ಕೆ ನೀಡಲಾಗಿತ್ತು. ಈ ಯೋಜನೆಯು ಸಾರ್ವಜನಿಕ ಕ್ಷೇತ್ರದ ಉದ್ದಿಮೆಗಳಲ್ಲಿ ಯಾವುದೇ ಪ್ರಗತಿಯನ್ನು ತರುವಲ್ಲಿ ವಿಫಲವಾಯಿತು.

ಶ್ರೀಮತಿ ಇಂದಿರಾ ಗಾಂಧಿಯು ತನ್ನ ಹೊಸ 20 ಅಂಶದ ಕಾರ್ಯಕ್ರಮದಲ್ಲಿ "ಕಾರ್ಮಿಕರ ಸಹಯೋಗದ" ಯೋಜನೆಯನ್ನು ಕೈ ಬಿಟ್ಟದ್ದು ಕೇವಲ ಕಾಕತಾಳೀಯವಲ್ಲ. ಆದರೆ ಆಡಳಿತ ವರ್ಗ ಮತ್ತು ಕಾರ್ಮಿಕರು ಈ ಅಂಶದತ್ತ ಗಮನ ಹರಿಸಲಿಲ್ಲ.

ಯೋಜನೆಗೆ ಪುನರ್ಜೀವ

ಸಾರ್ವತ್ರಿಕ ಚುನಾವಣೆಗಳು ಹತ್ತಿರವಾಗುತ್ತಿದ್ದಂತೆ ಕಾರ್ಮಿಕರ ಬಗ್ಗೆ ತನಗೆ ಅನುಕಂಪವಿದೆಯೆಂಬ ಭಾವನೆ ಮೂಡಿಸಲು ಆಳುವ ಪಕ್ಷ ಈ ಯೋಜನೆಯನ್ನು ಪುನಃ ಜಾರಿಗೆ ತರಲು ನಿರ್ಧರಿಸಿದೆ. ಕಲ್ಕತ್ತದಲ್ಲಿ ಎಐಸಿಸಿ ಸಮ್ಮೇಳನ ನಡೆಯುತ್ತಿರುವ ಸಮಯದಲ್ಲೇ ಈ ಯೋಜನೆಯನ್ನು ಗೆಜೆಟ್‌ನಲ್ಲಿ ಪ್ರಕಟಿಸಲಾಯಿತು.

ಈ ಯೋಜನೆಯು ಮೂಲತಃ ಕೇಂದ್ರ-ಸಾರ್ವಜನಿಕ ಕ್ಷೇತ್ರದ ಉದ್ದಿಮೆಗಳಿಗೆ ಮಾತ್ರ ರೂಪಿಸಿದ್ದರೂ, ರಾಜ್ಯ ಸರ್ಕಾರಗಳೂ ತಮ್ಮ ಉದ್ದಿಮೆಗಳಲ್ಲಿ ಈ ಯೋಜನೆಯನ್ನು ಜಾರಿಗೆ ತರುವಂತೆ ಕೇಳಲಾಗಿದೆ. ಖಾಸಗೀ ಕ್ಷೇತ್ರದ ಆಡಳಿತವನ್ನೂ ಈ ಬಗ್ಗೆ ಕೇಳಲಾಗಿದೆ. ಕೇಂದ್ರ ಸರ್ಕಾರವು ಈ ಬಗ್ಗೆ ಯಾವುದೇ ಶಾಸನವನ್ನು ತರಲು ಯೋಚಿಸದಿದ್ದರೂ ನೋಟಿಫಿಕೇಷನ್‌ನಿಂದ ತಿಳಿಯುವುದೇನೆಂದರೆ; ಈ ಯೋಜನೆಯ ಅನುಷ್ಠಾನದ ಅನುಭವದನಂತರ ಶಾಸನವೊಂದನ್ನು ತರುವುದು ಕೇಂದ್ರ ಸರ್ಕಾರದ ಉದ್ದೇಶವಾಗಿದೆ. ಹಾಗಾಗಿ ಕೇಂದ್ರ ಸರ್ಕಾರವು ಕೆಲವು ಸಮಯದ ನಂತರ ಈ ಯೋಜನೆಯ ಜಾರಿಗೆ ಕಾಯ್ದೆಬದ್ಧ ಒತ್ತಾಯ ತರಬಹುದಾಗಿದೆ.

ನೋಟಿಫಿಕೇಷನ್‌ನಲ್ಲಿ ನೀಡಿರುವ ವಿವರಣೆಯ ಪ್ರಕಾರ ಎಲ್ಲ ಇಲಾಖಾ ಉದ್ಯಮಗಳನ್ನು ಕೈ ಬಿಡಲಾಗಿದೆ. ಈ ಹಿಂದೆ ಅವುಗಳನ್ನು ಸೇರಿಸಲಾಗಿತ್ತು. ಇದಕ್ಕೆ ಸರ್ಕಾರ ನೀಡುವ ವಿವರಣೆಯೆಂದರೆ ಅವುಗಳಿಗೆ ಜಾಯಿಂಟ್ ಕನ್ಸಲ್ ಟೇಟಿವ್ ಮೆಷಿನರಿಯನ್ನು ಒದಗಿಸಲಾಗಿದೆ. ಈ ಬಗ್ಗೆ ಕಾರ್ಮಿಕ ಸಂಘಗಳು ತಮ್ಮ ಪ್ರತಿಭಟನೆಯನ್ನು ಸಲ್ಲಿಸಿವೆ. ಇದಲ್ಲದೆ ಈ ಯೋಜನೆಯ ಪರಿಧಿಯಲ್ಲಿ ನಿರ್ದಿಷ್ಟ ಉದ್ಯಮ ಬರದಂತೆ ವಿನಾಯತಿಯನ್ನು ನೀಡುವ ಅಧಿಕಾರವನ್ನು ಸರ್ಕಾರ ಸಂಬಂಧಿಸಿದ ಇಲಾಖೆಗಳಿಗೆ ನೀಡಿದೆ.

ಪ್ರಸ್ತುತದಲ್ಲಿ ಕಲ್ಲಿದ್ದಲು, ಉಕ್ಕು, ಬಿ. ಹೆಚ್. ಇ. ಎಲ್., ಎನ್. ಟಿ. ಪಿ. ಸಿ. ಮುಂತಾದ ಸಾರ್ವಜನಿಕ ಕ್ಷೇತ್ರದ ಉದ್ಯಮಗಳಲ್ಲಿ ದ್ವಿಪಕ್ಷೀಯ ವೇದಿಕೆಯನ್ನು ರಚಿಸಲಾಗಿದೆ. ಆದರೆ ಇವುಗಳು ಮೂಲತಃ ಕೂಲಿ ಮಾತುಕತೆ ನಡೆಸಲು ಇವೆ. ಇವುಗಳನ್ನು ಸಹಯೋಗದ ವೇದಿಕೆಗಳೆಂದು ಪರಿಗಣಿಸಬಾರದು ಮತ್ತು ಕಾರ್ಮಿಕರ ಪ್ರತಿನಿಧಿಗಳಿಗೆ ನಿರ್ಧಾರ ಮಾಡುವ ಅಧಿಕಾರವಿರುವುದಿಲ್ಲ.

ಜಾರಿಗೆ ಬರದ ವರದಿ

ಕೈಗಾರಿಕಾ ಇಲಾಖೆಯು ಸಾರ್ವಜನಿಕ ಕ್ಷೇತ್ರಗಳ ಉದ್ದಿಮೆಗಳ ಕಾರ್ಯವಿಧಾನವನ್ನು ಪರಿಶೀಲಿಸಲು 1978 ರಲ್ಲಿ ಕಾರ್ಮಿಕ ಸಂಘಗಳ ಸಮಿತಿಯೊಂದನ್ನು ರಚಿಸಿತು. ಸಮಿತಿಯು ಕಾರ್ಮಿಕರ ಸಹಯೋಗವನ್ನು ಕುರಿತಂತೆ ಸರ್ವಾನುಮತದ ವರದಿ ನೀಡಿತು. ಈ ಸಹಯೋಗವು ಎಲ್ಲ ಹಂತಗಳಲ್ಲೂ ಇಬ್ಬರ ನಡುವೆ ಸಮಾನತೆಯನ್ನಾಧರಿಸಿರಬೇಕು ಎಂದು ವರದಿ ತಿಳಿಸಿದೆ. ಎಲ್ಲಿಯವರೆಗೆ ಯಜಮಾನ ಮತ್ತು ಕೂಲಿ ಎಂಬ ಸಂಬಂಧ ಉಳಿಯುತ್ತದೆಯೋ ಅಲ್ಲಿಯವರೆಗೆ ಸಹಯೋಗ ಅರ್ಥಶೂನ್ಯವಾಗುತ್ತದೆ. ಸಾರ್ವಜನಿಕ ಕ್ಷೇತ್ರದ ಉದ್ದಿಮೆಗಳಲ್ಲಿ ಈಗ ನಡೆದಿರುವ ತಪಾಸಣೆಯ ಕ್ರಮವನ್ನು ತೆಗೆದು ಹಾಕಿದ ಹೊರತು ಯಾವುದೇ ಸಹಯೋಗದ ಯೋಜನೆ ನಿಷ್ಫಲವಾಗುತ್ತದೆ. ಸರ್ಕಾರ ಸಹಯೋಗ ಕುರಿತಂತೆ ಹಲವಾರು ಸಮಿತಿಗಳು ನೀಡಿರುವ ಯಾವುದೇ ವರದಿಯನ್ನು ಜಾರಿಗೆ ತಂದಿಲ್ಲ.

ನಿರ್ಣಾಯಕ ಅಧಿಕಾರ

ಈ ಯೋಜನೆಯ ಮುಖ್ಯವಾದ ಅಂಶ ಕಾರ್ಮಿಕರಿಗೆ ಪ್ರಾತಿನಿಧ್ಯ. ಇಲ್ಲಿಯೂ ಸರ್ಕಾರವು ಆಡಳಿತ ವರ್ಗಕ್ಕೆ ಹೆಚ್ಚು ಅಧಿಕಾರ ನೀಡಿದೆ. ಆಡಳಿತ ವರ್ಗವು ಉದ್ಯಮದ ಕಾರ್ಮಿಕ ಸಂಘದ ನಾಯಕರೊಡನೆ ಮಾತನಾಡಿ ಕಾರ್ಮಿಕ ಆಡಳಿತ ವರ್ಗದ ಪ್ರತಿನಿಧಿಗಳ ಸಂಖ್ಯೆಯನ್ನು ನಿಗದಿ ಮಾಡುತ್ತದೆ. ಕಾರ್ಮಿಕರ ನಿಜವಾದ ಪ್ರತಿನಿಧಿಗಳನ್ನು ಬಿಟ್ಟು ಆಡಳಿತ ವರ್ಗಕ್ಕೆ ಬೇಕಾದ ನಾಯಕರೊಂದಿಗೆ ಈ ಮಾತುಕತೆ ನಡೆಸಬಹುದಾಗಿದೆ. ಎಲ್ಲ ಕಾರ್ಮಿಕ ಸಂಘಗಳು ಸರ್ವಾನುಮತದಿಂದ ಈ ಸಮಸ್ಯೆಯನ್ನು ಬಗೆಹರಿಸಬೇಕೆಂದು, ಯೋಜನೆಯಲ್ಲಿ ಒಂದು ವೇಳೆ ಭಿನ್ನಾಭಿಪ್ರಾಯ ಬಂದರೆ ಪ್ರಜಾಸತ್ತಾತ್ಮಕ ರೀತಿಯಲ್ಲಿ ಪ್ರತಿನಿಧಿಯನ್ನು ನಿರ್ಧರಿಸುವುದಕ್ಕೆ ಸರ್ಕಾರ ಸಿದ್ಧವಿಲ್ಲ.

ಕುಪ್ರಸಿದ್ಧವಾದ ಬಾಂಬೆ ಇಂಡಸ್ಟ್ರಿಯಲ್ ರಿಲೇಷನ್ಸ್ ಕಾಯ್ದೆ ಮತ್ತು ಮಧ್ಯ ಪ್ರದೇಶ್ ಇಂಡಸ್ಟ್ರಿಯಲ್ ರಿಲೇಷನ್ಸ್ ಕಾಯ್ದೆಗಳು ಫ್ಯಾಕ್ಟರಿಯೊಳಗಿನ ತ್ರಿಪಕ್ಷೀಯ ಸಮಿತಿಗಳಿಗೆ ತಮಗೆ ಬೇಕಾದ ಸಂಘದವರನ್ನು ಪ್ರತಿನಿಧಿಯಾಗಿ ಮಾಡುವ ಅಧಿಕಾರವನ್ನು ಮಾಲೀಕರಿಗೆ ನೀಡಿವೆ. ಇದರ ವಿರುದ್ಧ ಕೇಂದ್ರ ಸರ್ಕಾರದ ಹೊಸ ಯೋಜನೆಯು ನಿಸ್ಸಹಾಯಕವಾಗಿದೆ. ಬಾಂಬೆ ಕಾಯ್ದೆಯನ್ವಯ ಅಂಗೀಕೃತವಾದ ಇಂಟಕ್ ಸಂಘಕ್ಕೆ ಕಾರ್ಮಿಕರ ಬೆಂಬಲವಿಲ್ಲದಿರುವುದು ಅಲ್ಲಿನ ಹತ್ತಿ ಗಿರಣಿ ಕಾರ್ಮಿಕರ ಮುಷ್ಕರದಿಂದ ಸಿದ್ಧವಾಗಿದೆ. ಒಂದು ವೇಳೆ ಇಂತಹ ಅಂಗೀಕೃತ ಸಂಘಗಳ ಪ್ರತಿನಿಧಿಗಳನ್ನು ಜಂಟೀ ಕಮಿಟಿಗಳಲ್ಲಿ ಪ್ರತಿನಿಧಿಸಲು ಅವಕಾಶ ಕೊಟ್ಟರೆ ಕೇಂದ್ರ ಸರ್ಕಾರದ ಯೋಜನೆ ಹಾಸ್ಯಾಸ್ಪದವಾಗುತ್ತವೆ.

ಹೊಸ ಯೋಜನೆ ವಿವಿಧ ಮಟ್ಟಗಳಲ್ಲಿ ಕಾರ್ಮಿಕರ ಸಹಯೋಗವನ್ನು ರೂಪಿಸಿದೆ. ಆದರೆ ಹಲವಾರು ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳಲ್ಲಿ ಈಗಾಗಲೇ ಇಂತಹ ಸಹಯೋಗವಿದ್ದರೂ ಕಾರ್ಮಿಕ ಪ್ರತಿನಿಧಿಗಳಿಗೆ ನಿರ್ಣಾಯಕ ಅಧಿಕಾರವಿಲ್ಲದಿರುವುದು ಅನುಭವದಿಂದ ಸಿದ್ಧವಾಗಿದೆ. ಕೆಲವೊಮ್ಮೆ ಆಡಳಿತ ಮಂಡಳಿಯ ಪ್ರತಿನಿಧಿಗಳಿಗೂ ನಿರ್ಧಾರ ತೆಗೆದುಕೊಳ್ಳುವ ಅಧಿಕಾರವಿರುವುದಿಲ್ಲ. ಕಾರಣ ಅಂತಹ ಅಧಿಕಾರ ಸಂಬಂಧಪಟ್ಟ ಮಂತ್ರಾಲಯಗಳಲ್ಲಿ ಕೇಂದ್ರೀಕೃತವಾಗಿದೆ.

ಕಾರ್ಮಿಕರಿಗೆ ಧ್ವನಿಯಿಲ್ಲ

ಕೈಗಾರಿಕಾ ಮಟ್ಟದ ಸಹಯೋಗದಲ್ಲೂ ಇಂತಹುವೇ ತೊಂದರೆಗಳಿವೆ. ಉದಾಹರಣೆಗೆ ಉತ್ಪಾದನೆಯ ಗುರಿಯನ್ನು ಯೋಜನಾ ಆಯೋಗದವರೊಂದಿಗೆ ಸಂಬಂಧಪಟ್ಟ ಮಂತ್ರಾಲಯವು ನಿರ್ಧರಿಸುತ್ತಿದ್ದು ಕಾರ್ಮಿಕ ಸಂಘಗಳಿಗೆ ಯಾವುದೇ ಪಾತ್ರವಿರುವುದಿಲ್ಲ. ಅಂತೆಯೇ ಶಕ್ತಿಯ ಸರಬರಾಜು, ಕಚ್ಚಾ ವಸ್ತುಗಳ ಸರಬರಾಜು ಮುಂತಾದವುಗಳ ಮೇಲೆಯೂ ಕಾರ್ಮಿಕ ಸಂಘಗಳಿಗೆ ನಿಯಂತ್ರಣವಿಲ್ಲ. ಸಾರ್ವಜನಿಕ ಕ್ಷೇತ್ರದ ಉದ್ಯಮಗಳಲ್ಲಿ ಐ. ಎಂ. ಎಫ್. ಸಾಲದ ಷರತ್ತುಗಳು ಸೃಷ್ಟಿಸಿರುವ ಅವಾಂತರದ ಬಗ್ಗೆಯೂ ಅವರಿಗೆ ಧ್ವನಿಯಿಲ್ಲ. ಆಂತರಿಕವಾಗಿಯೇ ಉಕ್ಕಿನ ಸರಬರಾಜು ಇದ್ದಾಗ್ಯೂ ಸರ್ಕಾರ ವಿದೇಶಗಳಿಂದ ಆಮದು ಮಾಡಿಕೊಳ್ಳುತ್ತಿರುವುದು ನಡೆದಿದೆ. ಇಂತಹ ಅನೇಕ ಉದಾಹರಣೆಗಳನ್ನು ನೀಡಬಹುದು.

ನಿರ್ದೇಶಕರ ಮಂಡಳಿಯಲ್ಲಿ ಕಾರ್ಮಿಕರ ಪ್ರತಿನಿಧಿ ಭಾಗವಹಿಸುವುದರಿಂದಾಗಿ ಪರಿಸ್ಥಿತಿ ಉತ್ತಮಗೊಂಡಿಲ್ಲ. ಈ ಯೋಜನೆಯು ಸಮಾನ ಸಂಖ್ಯೆಯ ಪ್ರತಿನಿಧಿಗಳಿಗೆ ಅನುವು ಮಾಡಿಕೊಟ್ಟಿಲ್ಲ. ಅಲ್ಲದೆ, ಅಂತಹ ಪ್ರತಿನಿಧಿಯು ಕಾರ್ಮಿಕರಿಂದ ಚುನಾಯಿತನಾಗಬೇಕೆಂಬುದನ್ನು ಸರ್ಕಾರ ಒಪ್ಪಿಕೊಂಡಿಲ್ಲ.

ಈ ಎಲ್ಲ ದೋಷಗಳನ್ನು ನಿವಾರಿಸದೆ ಕೇವಲ ತ್ರಿಪಕ್ಷೀಯ ಸಮಿತಿಯು ಆಡಳಿತದಲ್ಲಿ ಕಾರ್ಮಿಕರ ಸಹಯೋಗವನ್ನು ಅರ್ಥಪೂರ್ಣವಾಗಿಸುವುದಿಲ್ಲ.

ಅಪೂರ್ಣ ಮಾತುಕತೆಗಳು

ಈ ಯೋಜನೆಯನ್ನು ಕುರಿತಂತೆ ಚರ್ಚಿಸಲು ಫೆಬ್ರವರಿಯಲ್ಲಿ ಕೇಂದ್ರ ಕಾರ್ಮಿಕ ಮಂತ್ರಾಲಯವು ಸಭೆಯೊಂದನ್ನು ಕರೆದಿತ್ತು. ಸಭೆಯಲ್ಲಿ ಕಾ. ಎಂ. ಕೆ. ಪಂಧೆ ಮತ್ತು ಪಿ. ಕೆ. ಗಂಗೂಲಿ ಸಿಐಟಿಯುವನ್ನು ಪ್ರತಿನಿಧಿಸಿದ್ದರು. ಸಭೆಯಲ್ಲಿ ಇಂಟಕ್ ಹೊರತು ಎಲ್ಲರೂ ಕಾರ್ಮಿಕ ಪ್ರತಿನಿಧಿಗಳು ಚುನಾಯಿತ ಪ್ರತಿನಿಧಿಯಾಗಿರಬೇಕೆಂದು ಒತ್ತಾಯಿಸಿದರು. ಚರ್ಚೆ ಪೂರ್ಣವಾಗಿಲ್ಲದಿರುವುದರಿಂದಾಗಿ ಮುಂದಿನ ಸಭೆಯನ್ನು ಏಪ್ರಿಲ್‌ನಲ್ಲಿ ಕರೆಯಲಾಗಿದೆ.

(4ನೇ ಪುಟದಿಂದ)

ಸಂಪೂರ್ಣ ಬೆಂಬಲ ನೀಡಿತ್ತು. ಕಾ. ಸೂರ್ಯನಾರಾಯಣ ರಾವ್ ಮತ್ತು ವೈನಾಡು ಜಿಲ್ಲಾ ಕಮಿಟಿಯ ಕಾರ್ಯದರ್ಶಿ ಟಿ. ಎಸ್. ರಾಧಾಕೃಷ್ಣನ್ ಮೊದಲಾದವರನ್ನು ಕಾಫಿ ಬೋರ್ಡ್ ಅಧ್ಯಕ್ಷರು ಕರೆಸಿಕೊಂಡು ಅವರ ಜೊತೆಯಲ್ಲಿ ಚರ್ಚೆ ಮಾಡಿ ಸಮಸ್ಯೆಗಳ ಪರಿಹಾರಕ್ಕೆ ಪ್ರಯತ್ನಿಸುವುದಾಗಿ ಆಶ್ವಾಸನೆ ನೀಡಿದರು.

ಮಾಸ್ಕೋದಲ್ಲಿ 12ನೇ ಜಾಗತಿಕ ಯುವಜನಮೇಳ

12ನೇ ಜಾಗತಿಕ ಯುವಜನೋತ್ಸವ ಸೋವಿಯತ್ ರಾಜಧಾನಿ ಮಾಸ್ಕೋದಲ್ಲಿ ಮುಂದಿನ ವರ್ಷ ನಡೆಯಲಿದೆ. ಈ ಬಗ್ಗೆ ಲೆನಿನ್‌ವಾದಿ ಯುವ ಕಮ್ಯೂನಿಸ್ಟ್ ದಳದ ಅಖಿಲ ಒಕ್ಕೂಟ ಸಂಸ್ಥೆಯ (ಕೊಮ್ಸೊಮೊಲ್) ಕೇಂದ್ರ ಸಮಿತಿಯ ಸಲಹೆಯನ್ನು ಪ್ರಜಾಸತ್ತಾತ್ಮಕ ಯುವ ಜನತೆಯ ಜಾಗತಿಕ ಮಂಡಳಿ ಸರ್ವಾನುಮತದಿಂದ ಅಂಗೀಕರಿಸಿದೆ. 1985 ರಲ್ಲಿ ನಡೆಯಲಿರುವ ಜಾಗತಿಕ ಯುವಜನೋತ್ಸವಕ್ಕಾಗಿ ಪೂರ್ವ ಭಾವಿ ಸಿದ್ಧತೆಗಳನ್ನು ನಡೆಸುವ ಸಮಿತಿ ಈಗಾಗಲೇ ಈ ದಿಸೆಯಲ್ಲಿ ಕಾರ್ಯ ಪ್ರವೃತ್ತವಾಗಿದೆ.

ಜರ್ಮನಿಯ ನಾಝಿ ಪಡೆಗಳ ಆಕ್ರಮಣದ ವಿರುದ್ಧ ಹೋರಾಡಿ ಸೋವಿಯತ್ ಜನತೆಗಳಿಸಿದ ಅಭೂತಪೂರ್ವ ವಿಜಯದ 40ನೇ ವಾರ್ಷಿಕೋತ್ಸವವೂ 1985ರಲ್ಲಿ ನಡೆಯಲಿದೆ, ಹೆಲ್ಸಿಂಕಿಯ ಅಂತಿಮ ದಸ್ತಾವೇಜಿನ 10ನೇ ವರ್ಧಂತಿ ಮತ್ತು ವಿಶ್ವಸಂಸ್ಥೆ ಘೋಷಿಸಿರುವ ಅಂತರರಾಷ್ಟ್ರೀಯ ಯುವಜನರ ವರ್ಷವನ್ನೂ 1985ರಲ್ಲಿ ಆಚರಿಸಲಾಗುತ್ತದೆ. ಹೀಗಾಗಿ ಅದೇ ವರ್ಷ ನಡೆಯಲಿರುವ 12ನೇ ಜಾಗತಿಕ ಯುವಜನೋತ್ಸವ ವಿಶೇಷ ಮಹತ್ವಗಳಿಸಿದೆ. ಆ ದಿನ ಮಾಸ್ಕೋದಲ್ಲಿ ಸೇರಿಯುವ ಅಸಂಖ್ಯಾತ ಯುವ ಜನತೆ, ಮಾನವಕುಲವನ್ನು ನ್ಯೂಕ್ಲಿಯರ್ ಅನಾಹುತದತ್ತ ತಳ್ಳಲು ಅಮೆರಿಕದ ಸಾಮ್ರಾಜ್ಯಶಾಹಿ ನಡೆಸುತ್ತಿರುವ ಪ್ರಯತ್ನಗಳನ್ನು ಭಂಗಗೊಳಿಸಲು ಅಚಲ ನಿಷ್ಠೆಯಿಂದ ಹೋರಾಡುವ ದೃಢ ನಿರ್ಧಾರ ಕೈಗೊಳ್ಳಲಿದ್ದಾರೆ.

ಶಾಸಕ ಓಂಕಾರ್ ಪಾರ್ಟಿಯಿಂದ ಹೊರಗೆ

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿಯ ಆಂಧ್ರ ಸಮಿತಿಯ ಸೆಕ್ರೆಟಾರಿಯೇಟ್ ಸದಸ್ಯರೂ, ಶಾಸಕರೂ ಆದ ಓಂಕಾರ್ ಅವರನ್ನು ಪಾರ್ಟಿ ವಿರೋಧಿ ಚಟುವಟಿಕೆಗಳಿಗಾಗಿ ಪಾರ್ಟಿಯಿಂದ ಹೊರಗೆ ಹಾಕಲಾಗಿದೆ. ಪಾಲಿಟ್ ಬ್ಯೂರೋ ರಾಜ್ಯ ಸಮಿತಿಯ ಈ ನಿರ್ಣಯವನ್ನು ಎತ್ತಿ ಹಿಡಿದಿದೆ. ಪಾರ್ಟಿಯಿಂದ ಹೊರಗೆ ಹಾಕುವ ನಿರ್ಣಯ ಮಾಡುವ ಮುಂಚೆ ಓಂಕಾರ್‌ರವರ ತಪ್ಪು ರಾಜಕೀಯವನ್ನು, ಪಾರ್ಟಿ ವಿರೋಧಿ ಚಟುವಟಿಕೆಗಳನ್ನು ತಿದ್ದುವ ಸಲುವಾಗಿ ಆಂಧ್ರ ರಾಜ್ಯ ಸಮಿತಿಯು ಸಮಾಧಾನದಿಂದ ಅವರ ಜೊತೆಯಲ್ಲಿ ಚರ್ಚೆ ಮಾಡುವ, ಅವರಿಗೆ ಎಚ್ಚರಿಕೆ ಕೊಡುವ, ಅವರನ್ನು ಸಸ್ಪೆಂಡ್ ಮಾಡುವ, ಪಾರ್ಟಿಯ ಸೆಕ್ರೆಟಾರಿಯೇಟಿನಿಂದ ಅವರನ್ನು ಕಡಿಮೆ ಮಾಡುವಂಥ ಕ್ರಮಗಳನ್ನು ಕೈಗೊಂಡಿತ್ತು. ಪಾರ್ಟಿ ಧೋರಣೆಯ ಕುರಿತು ತನ್ನದು ಪ್ರತ್ಯೇಕ ನಿಲುಮೆ ಇದೆಂದೂ ಅದನ್ನು ಪಾರ್ಟಿ ಸದಸ್ಯರ ಮುಂದಿಡುತ್ತೇನೆಂದು ಹಟ ಹಿಡಿದು, ಪಾರ್ಟಿಯ ಜೀಪನ್ನು ಸ್ವಂತಕ್ಕೆ ಉಪಯೋಗಿಸಿ ಎಲ್ಲ ಕಡೆ ತಿರುಗಾಡಿ ಪಾರ್ಟಿ ವಿರೋಧಿ ದಸ್ತಾವೇಜನ್ನು ಸದಸ್ಯರ ಮಧ್ಯೆ ಪ್ರಚಾರ ಗೊಳಿಸಲು ಪ್ರಾರಂಭಿಸಿದರು. ವಾರಂಗಲ್‌ನಲ್ಲಷ್ಟೆ ಅಲ್ಲ ಹೈದರಾಬಾದ್ ನಗರದಲ್ಲೂ ತಮ್ಮ ಚಟುವಟಿಕೆ ಮುಂದುವರಿಸಿ ಪ್ರತ್ಯೇಕ ಪಾರ್ಟಿ ಕಟ್ಟುವ ತಯಾರಿ ನಡೆಸಿದರು.

ವಾರಂಗಲ್ ಜಿಲ್ಲೆಯಲ್ಲಿ, ಪ್ರತಿಗಾಮಿ ಭೂಮಾಲಕರ, ಇಂದಿರಾ ಕಾಂಗ್ರೆಸ್ಸಿನ, ನಕ್ಸಲೀಯರ ಅಮಾನುಷ ದಾಳಿ, ಕೊಲೆ ಸುಲಿಗೆ, ಪೋಲೀಸರ ದಬ್ಬಾಳಿಕೆಗಳ ವಿರುದ್ಧ ಸಿ.ಪಿ.ಐ.(ಎಂ) ಮತ್ತು ಸಾಮೂಹಿಕ ಸಂಘಟನೆಗಳು ಜೀವದ ಹಂಗು ತೊರೆದು ಹೋರಾಡುತ್ತಿವೆ. ಅಂಥ ದಬ್ಬಾಳಿಕೆಯನ್ನೆದುರಿಸಿ, ಸಾಮೂಹಿಕ ಸಂಘಟನೆ ಬೆಳೆಸಲು ರಾಜ್ಯ ಸಮಿತಿಯು ಸರಿಯಾದ ಧೋರಣೆಯನ್ನು ತಳೆದು, ಆ ಧೋರಣೆಯ ಅನುಷ್ಠಾನದಲ್ಲಿ ತರಲು ಸಾಕಷ್ಟು ಸಮಯ, ಹಣ ಖರ್ಚು ಮಾಡಿ, ಮುಂದುವರಿಯುತ್ತಿರುವಾಗ ಓಂಕಾರ್ ಅವರು ಪಾರ್ಟಿಯಲ್ಲಿಯ ತನ್ನ ಸ್ಥಾನವನ್ನು ದುರುಪಯೋಗ ಮಾಡಿಕೊಂಡರು. ಇವರನ್ನು ತಿದ್ದಲು ಅಸಾಧ್ಯವಾದುದರಿಂದ ಇವರನ್ನು ಪಾರ್ಟಿಯಿಂದ ತೆಗೆದು ಹಾಕಲಾಗಿದೆ. ಇವರು ಪಾರ್ಟಿಯಿಂದ ಆರಿಸಲ್ಪಟ್ಟಿರುವುದರಿಂದ ತನ್ನ ಎಂ. ಎಲ್. ಎ. ಸ್ಥಾನಕ್ಕೆ ರಾಜೀನಾಮೆ ಕೊಡಬೇಕು.

ಮಾರ್ಕ್ಸ್‌ವಾದ-ಲೆನಿನ್‌ವಾದ ಸಿದ್ಧಾಂತದ ಆಧಾರದಲ್ಲಿ ಸಿ. ಪಿ. ಐ. (ಎಂ) ತನ್ನ ರಾಜಕೀಯ ಮತ್ತು ತಾಂತ್ರಿಕ ನಿಲುಮೆಯನ್ನು ನಿರ್ಧರಿಸಿ ಇಡೀ ದೇಶದಲ್ಲಿ ಹಾಗೆಯೇ ಆಂಧ್ರ ರಾಜ್ಯದಲ್ಲಿ ಮುನ್ನಡೆ ಇಡುತ್ತಿದೆ. ಬಲಶಾಲಿಯಾದ ಬೃಹತ್ ಸಾಮೂಹಿಕ ಚಳುವಳಿಗಳನ್ನು ಸಂಘಟಿಸುತ್ತಿದೆ. ಪಾರ್ಟಿಯಲ್ಲಿ ಒಡಕುಂಟುಮಾಡಲು ಛಿದ್ರಕಾರಿಗಳು ಮಾಡಿರುವ ಪ್ರಯತ್ನಗಳು ಯಶಸ್ವಿಯಾಗಿಲ್ಲ, ಪಾರ್ಟಿ ಅಂಥ ಛಿದ್ರಕಾರಿ ಶಕ್ತಿಗಳನ್ನೆಲ್ಲ ಎದುರಿಸಿ ಹೆಚ್ಚು ಜನ ಬೆಂಬಲ ಪಡೆಯುತ್ತಿದೆ. ಆದ್ದರಿಂದ ಪಾರ್ಟಿಯ ಶಿಸ್ತನ್ನೂ, ಐಕ್ಯತೆಯನ್ನು ಇನ್ನೂ ಹೆಚ್ಚಿನ ಸ್ಫೂರ್ತಿಯಿಂದ ರಕ್ಷಿಸುವುದು ಪ್ರತಿಯೊಬ್ಬ ಪಾರ್ಟಿ ಸದಸ್ಯನ, ಸಹಾನುಭೂತಿದಾರನ ಕರ್ತವ್ಯವಾಗಿದೆಂದು ಆಂಧ್ರದ ಸಿ. ಪಿ. ಐ. (ಎಂ) ರಾಜ್ಯ ಸಮಿತಿ ಅಭಿಪ್ರಾಯ ವ್ಯಕ್ತಮಾಡಿದೆ.

ಚೀನಿ ಕಾರ್ಮಿಕ ಪ್ರತಿನಿಧಿಗಳಿಗೆ ಸನ್ಮಾನ

ಚೀನದ ಕಾರ್ಮಿಕ ಸಂಘಗಳ ಒಕ್ಕೂಟದ ಅಧ್ಯಕ್ಷರಾದ ಕಾ. ನೀಝುಫು ಅವರ ನೇತೃತ್ವದಲ್ಲಿ ಉಚ್ಚಮಟ್ಟದ ಆಯೋಗ ಐಎನ್‌ಟಿಯುಸಿ ಆಹ್ವಾನದ ಮೇರೆಗೆ ಭಾರತಕ್ಕೆ ಬಂದಿದ್ದು, ಮಾರ್ಚ್ 9 ರಂದು ದಿಲ್ಲಿಯ ಸಿ.ಐ.ಟಿ.ಯು. ಕೇಂದ್ರದಲ್ಲಿ ಅವರಿಗೆ ಸನ್ಮಾನ ಏರ್ಪಡಿಸಲಾಗಿತ್ತು. ಕಾ. ರಾಮಮೂರ್ತಿ ಮತ್ತು ಸಮರ ಮುಖರ್ಜಿಯವರು ಆಯೋಗವನ್ನು ಸ್ವಾಗತಿಸುತ್ತಾ, ಶತಮಾನಗಳಿಂದಲೂ ಭಾರತ-ಚೀನಾ ದೇಶಗಳ ಜನತೆಯೊಳಗೆ ಸೌಹಾರ್ದ ಸಂಬಂಧ ಬೆಳೆದು ಬಂದಿದೆಂದೂ, ಇತ್ತೀಚೆಗೆ ಗಡಿ ಸಂಬಂಧ ಉಂಟಾಗಿರುವ ಭಿನ್ನಾಭಿಪ್ರಾಯವನ್ನು ಚರ್ಚೆಯ ಮೂಲಕ ಸೌಹಾರ್ದಯುತವಾಗಿ ಬಗೆಹರಿಸಬೇಕೆಂದೂ, ಸಾಮ್ರಾಜ್ಯಶಾಹಿ ವಿರುದ್ಧ ಅದರಲ್ಲೂ ಮುಖ್ಯವಾಗಿ ಅಮೇರಿಕದ ಸಾಮ್ರಾಜ್ಯಶಾಹಿ ವಿರುದ್ಧ ಎರಡು ರಾಷ್ಟ್ರಗಳ ಕಾರ್ಮಿಕವರ್ಗ ಒಟ್ಟಾಗಿ ಹೋರಾಡಿ ಶಾಂತಿಪಾಲನೆಗೆ ಪ್ರಯತ್ನ ಮಾಡಬೇಕೆಂಬ ಆಶಯ ವ್ಯಕ್ತ ಮಾಡಿದರು. ಕಾ. ನೀಝುಫು ಅವರು ಸಿಐಟಿಯು ಮುಖಂಡರ ಅನಿಸಿಕೆಯನ್ನು ಸ್ವಾಗತಿಸಿ ಎರಡೂ ರಾಷ್ಟ್ರಗಳ ಕಾರ್ಮಿಕರ ಸಂಬಂಧ ಇನ್ನೂ ಹೆಚ್ಚು ಬಲಗೊಳ್ಳಲೆಂದು ಹಾರೈಸಿದರು. ನಮ್ಮ ರಾಜ್ಯದ ಕಾ. ನಂಜುಂಡಪ್ಪ ಮೊದಲಾದವರೂ ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದರು.

ಸದರನ್ ಇಂಡಿಯಾ ಸಂಸ್ಥೆಯ ಬೀಡಿ ಕಾರ್ಮಿಕರು ಹೋರಾಟದ ಕಣದಲ್ಲಿ

ಸದರನ್ ಇಂಡಿಯಾ ಬೀಡಿ ಮ್ಯಾನುಫ್ಯಾಕ್ಚರಿಂಗ್ ಸಂಸ್ಥೆಯ ಮುಖ್ಯ ಪ್ರಧಾನ ಕಛೇರಿ ಇರುವುದು ಮಧ್ಯಪ್ರದೇಶದ ಜಬಲ್ಪುರದಲ್ಲಿ. ಈ ಸಂಸ್ಥೆಯು ತನ್ನ ಕೈಗಾರಿಕೆಯನ್ನು ವಿಸ್ತರಿಸುವ, ವ್ಯಾಪಿಸುವ ದೃಷ್ಟಿಯಲ್ಲಿ ಅಲ್ಲಲ್ಲಿ ಬೀಡಿ ಕಟ್ಟಿಸುವ ಕೇಂದ್ರಗಳನ್ನು ಆರಂಭಿಸಿ, ಸ್ವಲ್ಪ ಸಮಯ ಕಳೆದ ಬಳಿಕ ರಾತ್ರೋರಾತ್ರಿ ತಮ್ಮ ಸಾಮಾನು ಸರಂಜಾಮುಗಳನ್ನು ಕಟ್ಟಿಕೊಂಡು ಇನ್ನೊಂದು ಊರಿಗೆ ವರ್ಗಾಯಿಸುವುದು ಕಥೆ.

ಸುಮಾರು ಮೂರು ವರ್ಷಗಳ ಹಿಂದೆ ಮಂಗಳೂರಿನ ಲಾಲ್‌ಬಾಗಿನಲ್ಲಿ ಈ ಸಂಸ್ಥೆಯವರು ಬೀಡಿ ಉದ್ಯಮವನ್ನು ಆರಂಭಿಸಿದರು. ಮೂರು ವರ್ಷಗಳು ಕಳೆದ ಕೂಡಲೇ ಅಲ್ಲಿ ಯಾರಿಗೂ ಸುದ್ದಿ ತಿಳಿಸದೇ ತಮ್ಮ ಕೈಗಾರಿಕೆಯನ್ನು ರದ್ದುಪಡಿಸಿ, ಪುತ್ತೂರಿಗೆ ವರ್ಗಾಯಿಸಿದರು. ಬೀಡಿ ಉದ್ಯಮವನ್ನು ಮುಚ್ಚುವ, ಅಥವಾ ವರ್ಗಾಯಿಸುವ ಯಾವುದೇ ಮುನ್ಸೂಚನೆಯನ್ನೂ ಬೀಡಿ ಕಾರ್ಮಿಕರಿಗಾಗಲೀ ಇತರ ಕಂಟ್ರಾಕ್ಟುದಾರರಿಗಾಗಲೀ ತಿಳಿಸಲಿಲ್ಲ.

ಈ ಉದ್ಯಮದಡಿಯಲ್ಲಿ ಮಂಗಳೂರಿನ ಪದವು ಪ್ರದೇಶದಲ್ಲಿ ಬೀಡಿ ಕಟ್ಟುತ್ತಿದ್ದ ಸಾವಿರಾರು ಮಂದಿ ಕೆಲಸ ಕಳೆದುಕೊಳ್ಳಬೇಕಾಯಿತು. ಮಾತ್ರವಲ್ಲದೆ, ಕಾರ್ಮಿಕರಿಗೆ ಸಲ್ಲತಕ್ಕ, ಸಂಬಳ, ಬೋನಸ್, ಹಬ್ಬದ ಸಂಬಳ ರಜೆ ಸಂಬಳ ಹೆರಿಗೆ ಭತ್ತೆ, ಮತ್ತು ಕ್ಷೇಮ ನಿಧಿಯೇ ಮೊದಲಾದ ಸವಲತ್ತುಗಳನ್ನು ಕೊಡಲಿಲ್ಲ.

ತಮಗೆ ನ್ಯಾಯಯುತವಾಗಿ ಸಿಗಲೇಬೇಕಾಗಿದ್ದ ಸವಲತ್ತುಗಳನ್ನು ಪಡೆದುಕೊಳ್ಳಲು ಕಾರ್ಮಿಕರು ಹಲವಾರು ಬಾರಿ, ಮನವಿಗಳ ಮೂಲಕ ಸಂಬಂಧಪಟ್ಟವರನ್ನು ಹಲವಾರು ಬಾರಿ ಕೇಳಿಕೊಂಡರೂ ಸದರಿ ಬೀಡಿ ಉದ್ಯಮದ ಮಾಲಕ ವರ್ಗದವರು ಕಾರ್ಮಿಕರಿಗೆ ನ್ಯಾಯಯುತವಾಗಿ ಸಲ್ಲತಕ್ಕ ಮಜೂರಿ ಇತ್ಯಾದಿಗಳನ್ನು ಕೊಡಲು ನಿರಾಕರಿಸುತ್ತಿದ್ದಾರೆ. ಇದರಿಂದ ಬೇಸತ್ತ ಕಾರ್ಮಿಕರು ತಾವು ದುಡಿದು ಸಂಪಾದಿಸಿದ ಮಜೂರಿ ಮೊದಲಾದ ಸವಲತ್ತುಗಳನ್ನು ಪಡೆದು ಕೊಳ್ಳಲು ನ್ಯಾಯಯುತವಾಗಿ ಮತ್ತು ಶಾಂತಿಯುತವಾಗಿ ಹೋರಾಟದ ಕಣಕ್ಕಿಳಿದಿದ್ದಾರೆ.

ಬೇಡಿಕೆಗಳು : ಮಜೂರಿ, ರಜೆಯ ಸಂಬಳ, ಬೋನಸ್, ಹೆರಿಗೆ ಭತ್ತೆ—ಮೊದಲಾದ ಸವಲತ್ತುಗಳು ಸಿಗುವವರೆಗೆ ಫೇಕ್ಟರಿಯ ಪುತ್ತೂರು ಡಿಪೋದ ಎದುರು ಅನಿರ್ದಿಷ್ಟಾವಧಿಯ ಸತ್ಯಾಗ್ರಹವನ್ನು ನಡೆಸಲಿರುವರೆಂದು ಬೀಡಿ ಸಂಘಟನೆಯ ಪರವಾಗಿ ಪದವು ಪ್ರದೇಶ ಬೀಡಿ ಕೆಲಸಗಾರರ (ಸಿಐಟಿಯು) ಸಂಘದ ಕಾರ್ಯದರ್ಶಿಯವರು ಪತ್ರಿಕಾ ಹೇಳಿಕೆಯ ಮೂಲಕ ತಿಳಿಸಿರುತ್ತಾರೆ.

ಕೋಲಾರ

ಡಿ. ವೈ. ಎಫ್. ಐ. ನಿಂದ ಜಾಥಾ

ಡಿ.ವೈ.ಎಫ್.ಐ. ನ ನಿರ್ಣಯದಂತೆ ಮಾ. 20 ರಿಂದ ವಾರಾಚರಣೆ ನಡೆಯುತ್ತಿದ್ದು, ಇದರ ಅಂಗವಾಗಿ ಕೋಲಾರ ಜಿಲ್ಲಾ ಸಮಿತಿಯ ಆಶ್ರಯದಲ್ಲಿ ಜನ ಜಾಗೃತಿ ಆಂದೋಳನವನ್ನು ಸಂಘಟಿಸಿದ್ದು, 20 ರಂದು ಗೌರಿಬಿದನೂರಿನಲ್ಲಿ ಉದ್ಘಾಟನೆಯಾಗಲಿದ್ದು ಜಿಲ್ಲೆಯಾದ್ಯಂತ ಟೆಂಪೋ ಜಾಥದ ಮುಖಾಂತರ ಸಂಚರಿಸಿ, ನಿರುದ್ಯೋಗ, ಅನಕ್ಷರತೆ, ಬಡತನ, ವರದಕ್ಷಿಣೆ ಮುಂತಾದ ಸಮಸ್ಯೆಗಳ ವಿರುದ್ಧ ಜನರನ್ನು ಜಾಗೃತಿಗೊಳಿಸುವುದಲ್ಲದೆ, ರಾಷ್ಟ್ರದ ಐಕ್ಯತೆಗಾಗಿ, ವಿಶ್ವಶಾಂತಿಗಾಗಿ ಜನರಲ್ಲಿ ಪ್ರಜ್ಞೆ ಉಂಟುಮಾಡುತ್ತಾ ಜಾಥವು ಮಾರ್ಚ್ 28 ರಂದು ಕೋಲಾರ ತಲುಪಲಿದೆ ಎಂದು ಪ್ರಕಟನೆ ತಿಳಿಸಿದೆ.

ಮಾರ್ಚ್ 28 ರ ನಿರುದ್ಯೋಗ ವಿರೋಧಿ ದಿನಾಚರಣೆಯ ಅಂಗವಾಗಿ ವಿಜಯನಗರ ಉಕ್ಕಿನ ಕಾರ್ಖಾನೆಗೆ ಒತ್ತಾಯಿಸಿ, ಬೃಹತ್ ಪ್ರದರ್ಶನವನ್ನು ಕೋಲಾರದಲ್ಲಿ ನಡೆಸಲಾಗುವುದು, ಹಾಗೂ ಇದೇ ದಿವಸ ಜಾಥಾದ ಮುಕ್ತಾಯ ಸಮಾರಂಭಕ್ಕಾಗಿ ಬಹಿರಂಗ ಸಭೆಯನ್ನು ಕೋಲಾರದಲ್ಲಿ ಏರ್ಪಡಿಸಿ ಜಿಲ್ಲಾಧಿಕಾರಿಗಳಿಗೆ ಮನವಿ ನೀಡಲಾಗುವುದು.

ಜಿಲ್ಲೆಯಾದ್ಯಂತ ಜಾಥಾದ ಸಮಯದಲ್ಲಿ ಸಾಂಸ್ಕೃತಿಕ ತಂಡ ಕಾರ್ಯಕ್ರಮಗಳನ್ನು ನೀಡುತ್ತದೆ ಎಂದು ಡಿ. ವೈ. ಎಫ್. ಐ ಕೋಲಾರ ಜಿಲ್ಲಾ ಸಮಿತಿಯ ಸಂಚಾಲಕ ಕೆ. ವಿ. ಸತ್ಯನಾರಾಯಣ ತಿಳಿಸಿದ್ದಾರೆ.

ಕಾರ್ಮಿಕರ ಬೇಡಿಕೆ ದಿನಾಚರಣೆ

ಸಿ. ಐ. ಟಿ. ಯು. ರಾಜ್ಯ ಸಮಿತಿಯ ಕರೆಯ ಮೇರೆಗೆ 14-3-84 ರಂದು ಪ್ಲೈಯ್‌ವುಡ್ ಕಾರ್ಮಿಕ ಸಂಘ, ಮೊಪೆಕ್ಸ್, ಮೈಸೂರ್ ಕಿರ್ಲೋಸ್ಕರ್, ಹಾಗು ಟ್ರೆವಾಕ್ ಕಾರ್ಮಿಕ ಸಂಘಗಳು ಜಂಟಿಯಾಗಿ ಮೆರವಣಿಗೆಯಲ್ಲಿ ಹೋಗಿ ಜಿಲ್ಲಾಧಿಕಾರಿಗಳಿಗೆ ಮನವಿ ಕೊಟ್ಟು ನಂತರ ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಹೊರಟು ಗಾಂಧಿ ಚೌಕದಲ್ಲಿ ಬಹಿರಂಗ ಸಭೆ ನಡೆಸಿದರು. ಬಹಿರಂಗ ಸಭೆಯಲ್ಲಿ ಸ್ಥಳೀಯ ಸಂಘದ ಮುಖಂಡರಾದ ಸ್ವಾಮಿ ನಿತಾನಂದರು ಹಾಗು ಸಿ. ಐ. ಟಿ. ಯು ಕಾರ್ಯಕರ್ತರಾದ ಎಂ. ಬಿ. ಕಟ್ಟಿ ಇವರು ಮಾತನಾಡಿದರು. ಶ್ರೀ ಬ್ಯಾಟಗಾರ ಕೊನೆಯಲ್ಲಿ ವಂದಿಸಿದರು. ಇವರ ಬೇಡಿಕೆಗಳು 10 ಇದ್ದು ಅದರಲ್ಲಿ ಪ್ರಮುಖವಾದವು ಯೆಂದರೆ, ಕಾರ್ಮಿಕರ ಮೇಲಿರುವ ಪೋಲೀಸ್ ಕೇಸುಗಳನ್ನು ಹಿಂತೆಗೆದು ಕೊಳ್ಳುವುದು, ಕಾರ್ಮಿಕರಿಗೆ ಕನಿಷ್ಟ ಕೂಲಿಗೆ ಒತ್ತಾಯ. ಇ. ಎಸ್. ಐ. ಗಳಲ್ಲಿ ಸಾಕಷ್ಟು ಸಿಬ್ಬಂದಿ ಮತ್ತು ಔಷಧಕ್ಕೆ ಪೂರೈಕೆ.

ಸಂತಾಪ

ಮಂಗಳೂರು ಬೋಳೂರು ಮಹಾಲಕ್ಷ್ಮಿ ಹಂಚಿನ ಕಾರ್ಖಾನೆಯಲ್ಲಿ ಕೆಲಸ ಮಾಡಿ ಕೊಂಡಿರುವ ಹಾಗೂ ಪದವು ಪ್ರದೇಶ ಸಿ. ಐ. ಟಿ. ಯು ಬೀಡಿ ಕೆಲಸ ಗಾರರ ಸಂಘದ ಕಾರ್ಯಕರ್ತರಾದ ಸೀತಾರಾಮರವರ ತಂದೆ ಶ್ರೀ ಬಾಬು ಮೂಲ್ಯರವರು ತನ್ನ 80 ನೇ ವರ್ಷ ಪ್ರಾಯದಲ್ಲಿ ಫೆಬ್ರವರಿ 18 ರಂದು ನಿಧನರಾದುದರ ಬಗ್ಗೆ ಪದವು ಪ್ರದೇಶ ಸಿ. ಐ. ಟಿ. ಯು. ಬೀಡಿ ಕೆಲಸ ಗಾರರ ಸಂಘದ ಕಮಿಟಿ ಸಭೆ ಸಂತಾಪ ಸೂಚಿಸಿದೆ.

●

ಮಾರ್ಕ್ಸ್‌ವಾದೀ ಕಮ್ಯೂನಿಸ್ಟ್ ಪಾರ್ಟಿಯ ಮಂಗಳೂರು ತಾಲ್ಲೂಕಿನ ಬೋಳಾರ ಪೂರ್ವಶಾಖೆಯ ಸದಸ್ಯರಾದ ಕಾ. ಜೆ. ರಾಮಣ್ಣರವರ ತಂದೆಯವರಾದ ಶ್ರೀ ವೆಂಕಪ್ಪ ಪೂಜಾರಿಯವರು ತನ್ನ 65 ನೇ ವಯಸ್ಸಿನಲ್ಲಿ ಮಾರ್ಚ್ 4 ರಂದು ನಿದನರಾದ ಬಗ್ಗೆ ಬೋಳಾರ ಪೂರ್ವ ಶಾಖೆಯು ಸಭೆ ಸೇರಿ ದಿವಂಗತರ ನಿಧನಕ್ಕೆ ತಮ್ಮ ಸಂತಾಪವನ್ನು ವ್ಯಕ್ತ ಪಡಿಸಿದೆ.

●

ಕುಪ್ಪೆ ಪದವು (ದ. ಕನ್ನಡ) ಪ್ರದೇಶ ಬೀಡಿ ಕೆಲಸಗಾರರ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಕಾ. ಎಂಕಮ್ಮ ಅವರು 6-1-84 ರಂದು ನಿಧನ ಹೊಂದಿದರು. ಸಂಘವು ಇವರ ನಿಧನಕ್ಕೆ ಸಂತಾಪ ಸೂಚಿಸಿದೆ.

ಕೇಂದ್ರ ಸರಕಾರದ ಆರ್ಥಿಕ ನೀತಿ - ಹೀಗಿದೆ ನೋಡಿ !

ಹತ್ತು ದೊಡ್ಡ ಮನೆತನಗಳ ಆಸ್ತಿ

	1981 (ಕೋಟಿ ರೂ)	1982 (ಕೋಟಿ ರೂ)	ಒಂದು ವರ್ಷದಲ್ಲಿ ಹೆಚ್ಚಳ (ಕೋಟಿ ರೂ)
ಟಾಟಾ	1840·16	2430·83	590 67
ಬಿರ್ಲಾ	1691·69	20004·[illegible]4	313·07
ಸಿಂಘಾನಿಯಾ	520·14	620·31	100·17
ಮಫತ್‌ಲಾಲ್	535·12	610·69	75·57
ರಿಲಯನ್ಸ್ ಟೆಕ್ಸ್‌ಟೈಲ್ಸ್	270·61	512·34	241·73
ಎ.ಸಿ.ಸಿ.	342·77	473·07	130·30
ಥಾಪರ್	427·80	464·55	34·75
ಐ.ಸಿ.ಐ	387·84	378·31	40·47
ಕಿರ್ಲೋಸ್ಕರ್ / ಸಾರಾಭಾಯಿ	331·25	374·31	43·06
ಮೋದಿ	241·90	359·20	117·30

ಟಾಟಾ ಅವರ ಆಸ್ತಿ 1972 ರಲ್ಲಿ ರೂ. 641·93 ಕೋಟಿ ಇದ್ದದ್ದು 1981 ರಲ್ಲಿ ರೂ. 1840·16 ಕೋಟಿಯಷ್ಟಾಗಿದೆ. ಬಿರ್ಲಾ ಅವರ ಆಸ್ತಿ 1972 ರಲ್ಲಿ ರೂ. 529·42 ಇತ್ತು. 1981 ರಲ್ಲಿ ಅದು ರೂ. 1691·69 ಕೋಟಿಯಾಗಿದೆ.

ಗುತ್ತೇದಾರಿಗಳ ಆಸ್ತಿ ಈ ರೀತಿ ಮಿತಿ ಮೀರಿ ಹೆಚ್ಚಾಗುತ್ತಿರುವಾಗ ಮತ್ತೊಂದು ಕಡೆಯಲ್ಲಿ ಚಿಂತಾಜನಕ ಚಿತ್ರ ನೋಡುತ್ತಿದ್ದೇವೆ. ನಮ್ಮ ದೇಶದಲ್ಲಿ ಆರ್ಥಿಕವಾಗಿ ಬಿಕ್ಕಟ್ಟನ್ನೆದುರಿಸುತ್ತಿರುವ ಕೈಗಾರಿಕೆಗಳ ಸಂಖ್ಯೆ 1979 ಡಿಸೆಂಬರ್ ತಿಂಗಳಲ್ಲಿ 22, 366 ಇತ್ತು. ಅದು 1982 ಜನವರಿಯಲ್ಲಿ 28,428 ರಷ್ಟಾಯಿತು. ಅಂದರೆ ಶೇ. 27ರಷ್ಟು ಹೆಚ್ಚಾಯಿತು. ಈ ಕಾಲದಲ್ಲಿ ಇಂಥ ಬಿಕ್ಕಟ್ಟನ್ನೆದುರಿಸುವ ಕೈಗಾರಿಕೆಗಳಿಗೆ ಬ್ಯಾಂಕುಗಳ ಸಾಲ ರೂ 1623 ಕೋಟಿಯಿಂದ ರೂ. 2299 ಕೋಟಿಯಷ್ಟು ಹೆಚ್ಚಾಯಿತು. ಈಗ ಅದು 2500 ಕೋಟಿ ತಲ್ಪಿದೆ. ಗುತ್ತೇದಾರಿ ಮನೆತನಗಳಿಗೆ ಧನ ಸಹಾಯ ಮಾಡಲು ಬ್ಯಾಂಕುಗಳನ್ನು ಪಯೋಗಿಸಲಾಗುತ್ತಿದೆ.

ಕೈಗಾರಿಕೆಗಳ ಆರ್ಥಿಕ ಬಿಕ್ಕಟ್ಟು ಹೆಚ್ಚಾಗುತ್ತಿರುವಾಗ, ಸರಕಾರದ ಧೋರಣೆಗಳಿಂದಾಗಿ, ನಿರುದ್ಯೋಗ ಜಾಸ್ತಿಯಾಗುತ್ತಿದೆ, ಜೀವನ ಸೂಚ್ಯಾಂಕ ಗಗನಕ್ಕೇರುತ್ತಿದೆ, ಈ ಬಿಕ್ಕಟ್ಟಿನ ಭಾರವನ್ನು ಬಡವರ ಮೇಲೆ ಹೇರಲಾಗುತ್ತಿದೆ.

1970-71 ನ್ನು ಮೂಲ ವರ್ಷವಾಗಿ ಹಿಡಿದರೆ 1983 ಡಿಸೆಂಬರ್ ಕೊನೆಗೆ ರೋಕ ಬೆಲೆ ಸೂಚ್ಯಾಂಕ 318·17 ರಷ್ಟಾಗಿದೆ, ಅಂದರೆ ಮೂರು ಪಟ್ಟು ಹೆಚ್ಚಾಗಿದೆ.

ಕಳೆದ ಐದು ವರ್ಷಗಳಲ್ಲಿ ಬಳಕೆಗಾರರ ಬೆಲೆ ಮಟ್ಟ ಶೇ. 60 ರಷ್ಟು ಕ್ಷಿಪ್ರಗತಿಯಲ್ಲೂ ಹೆಚ್ಚಾಗಿದೆ. 1978-79 ರಲ್ಲಿ 186 ರಷ್ಟಿದ್ದ ರೋಕ ಬೆಲೆ ಸೂಚ್ಯಾಂಕ ಹೋದವಾರ 320 ರಷ್ಟಾಗಿದೆ. ಹಾಗೆಯೇ ಗ್ರಾಹಕರ ಬೆಲೆ ಸೂಚ್ಯಾಂಕ 1960-61 ನ್ನು ಮೂಲ ವರ್ಷವಾಗಿ ಹಿಡಿದಾಗ 331 ರಿಂದ 565 ರಕ್ಕೇರಿದೆ.

ಅಗ್ಗದರದ ಅಂಗಡಿಗಳಲ್ಲಿ ಹಂಚುವ ಅಕ್ಕಿಯದರವನ್ನು 16-1-84 ರಿಂದು ಕ್ವಿಂಟಲಿಗೆ ರೂ 20 ರಷ್ಟು ಏರಿಸಲಾಯಿತು. ಹಾಗೆಯೇ ಸಕ್ಕರೆಯ ಬೆಲೆಯನ್ನು ತಾ. 1·2·84 ರಿಂದ ಕ್ವಿಂಟಲಿಗೆ ರೂ. 25 ರಷ್ಟು. ಸಿ. ಐ. ಎಲ್. ಕಲ್ಲಿದ್ದಲ ಬೆಲೆಯನ್ನು 8·1·84 ರಿಂದ. ರೂ 149·90 ರಿಂದ ರೂ. 183 ರಷ್ಟು, ಸಿಂಗರೇನಿ ಕಲ್ಲಿದ್ದಲು ಬೆಲೆಯನ್ನು ರೂ. 154·75 ರಿಂದ ರೂ. 192· ರಷ್ಟು ಮೆಟ್ರಿಕ್ ಟನ್ನಿಗೆ ಹೆಚ್ಚಿಸಲಾಗಿದೆ.

ಇದರ ಜೊತೆಯಲ್ಲಿಯೇ ಬೇಳೆಕಾಳು, ಚಹಾ-ಕಾಫಿ, ಉರುವಲು, ವಿದ್ಯುಚ್ಛಕ್ತಿಗಳ ಬೆಲೆಗಳೂ ನಾಲ್ಕಾರು ಪಟ್ಟು ಹೆಚ್ಚಾಗಿದೆ.

ರೋಕ ಬೆಲೆ 1977ರಲ್ಲಿ 181·1, 1979 ರಲ್ಲಿ 184·6, 1980 ರಲ್ಲಿ 227·2, 1983 ರಲ್ಲಿ 319·6 ರಷ್ಟಾಗಿದೆ. ಇದು ಬಂಡವಾಳ ಶಾಹಿ-ಭೂಮಾಲಕ ಆಳ್ವಿಕೆಯ ಫಲ.

ಸರಕಾರಿ ಗೋದಾಮುಗಳಲ್ಲಿ ಆಹಾರ ಧಾನ್ಯ ಹಾಳಾಗುತ್ತಿದೆ. ಎಷ್ಟು ಗೊತ್ತೆ ?

ವರ್ಷ	ಮೆಟ್ರಿಕ್ ಟನ್	ರೂ. ಲಕ್ಷ
1-48-0	74,785	307·39
1-4-81	75,717	389·99
1 4 82	98,009	558·29
1-4-83	90,701	463·75

ಆದಾಯಕರದ ಬಾಕಿ ಎಷ್ಟಿದೆ ಗೊತ್ತೆ .?

30-3-1983 ರಂದು ರೂ. 844·93 ಕೋಟಿ ಬಾಕಿಯಿತ್ತು.

30-6-83 ರಂದು ರೂ 969·55 ಕೋಟಿ ಬಾಕಿ ಉಳಿದಿದೆ.

ರಾಷ್ಟ್ರೀಕೃತ ಬ್ಯಾಂಕುಗಳು 85 ಗುತ್ತೇದಾರಿ ಮನೆತನಗಳಿಗೆ ಸಾಲ ಕೊಡುತ್ತಿವೆ. ಬಂಡವಾಳ ಹೂಡಿಕೆಯ ಸಲುವಾಗಿ ಈ 85 ಗುತ್ತೇದಾರಿ ಮನೆತನಗಳಿಗೆ ರೂ. 4068 ಕೋಟಿ ಕೊಟ್ಟಿದೆ. ಇದರ ಪೈಕಿ ರೂ. 2680 ಕೋಟಿ ವಸೂಲಿಯಾಗದೆ ಬಾಕಿ ಉಳಿದಿದೆ.

ಸಿ. ಐ. ಟಿ. ಯು ಬೇಡಿಕೆ ದಿನಾಚರಣೆ

ಮಂಗಳೂರು

ಸಿ. ಐ. ಟಿ. ಯು. ಕರೆಯ ಮೇರೆಗೆ ಮಾರ್ಚ್ 14 ರಂದು ನೂರಾರು ಕಾರ್ಮಿಕರು ಮಂಗಳೂರಿನಲ್ಲಿ ಡಿ. ಸಿ. ಆಫೀಸಿನ ಮುಂದೆ ಮತ ಪ್ರದರ್ಶನ ನಡೆಸಿ ತಮ್ಮ ಬೇಡಿಕೆಗಳ ಮನವಿಯನ್ನರ್ಪಿಸಿದರು ನಂತರ ನಡೆದ ಸಭೆಯಲ್ಲಿ ಕಾ. ಮಾಧವ, ಮೂಸಬ್ಬ ಲೋಕಯ್ಯ, ರಾಮಕೃಷ್ಣ ಮೊದಲಾದವರು ಭಾಷಣ ಮಾಡಿದರು.

ಕುಂದಾಪುರ

ಸಿ. ಐ. ಟಿ. ಯು. ಕರೆಯ ಮೇರೆಗೆ ಮಾರ್ಚ್ 14 ರಂದು ತಾಲ್ಲೂಕು ಕಚೇರಿ ಎದುರು ಬೃಹತ್ ಪ್ರದರ್ಶನ ನಡೆದು ತಹಸೀಲ್ದಾರ್‌ರವರಿಗೆ ಮನವಿ ಅರ್ಪಿಸಲಾಯಿತು. ನಂತರ ನಡೆದ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಸಿ. ಐ. ಟಿ ಯು. ಮುಂದಾಳುಗಳಾದ ಕಾ. ಕೆ. ಶಂಕರ್ ಕಾ.ಸಿ. ನಾರಾಯಣ ಮತ್ತು ಕಾ. ಅಬ್ರಹಾಂ ಕರ್ಕಡ ಮಾತನಾಡಿದರು. ಪ್ರಾರಂಭದಲ್ಲಿ ಕಾ. ವಿ. ಮಹಾಬಲ ಅವರು ಸ್ವಾಗತಿಸಿ ಕೊನೆಗೆ ಎಚ್. ನರಸಿಂಹ ಅವರು ವಂದಿಸಿದರು.

ಉಡುಪಿ

ಮಾರ್ಚ್ 14 ರಂದು ಉಡುಪಿಯಲ್ಲಿ ಬೇಡಿಕೆ ದಿನಾಚರಣೆ ಆಚರಿಸಲಾಯಿತು. ಕಾರ್ಮಿಕರು ಬೃಹತ್ ಮೆರವಣಿಗೆ ನಡೆಸಿ ತಹಸೀಲ್ದಾರರವರಿಗೆ ಮನವಿ ಅರ್ಪಿಸಿದರು. ನಂತರ ರಥಬೀದಿಯಲ್ಲಿ ನಡೆದ ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಕಾ. ಡೇವಿಡ್ ಕರ್ಕಡ ವಹಿಸಿದ್ದರು ಸಭೆಯಲ್ಲಿ ಕಾ. ಎಚ್. ವಿಠಲ, ರಾಮ ಕೆ. ಕುಂದರ್ ಮೊದಲಾದವರು ಮಾತನಾಡಿದರು.

ಬಂಟ್ವಾಳ

ಮಾರ್ಚ್ 14 ರಂದು ಸಿ. ಐ. ಟಿ. ಯು. ನೀಡಿದ ಕರೆಯಂತೆ ಬಂಟ್ವಾಳದಲ್ಲಿ ಸಿ. ಐ. ಟಿ. ಯು.ಗೆ ಸೇರಿರುವ ಕಾರ್ಮಿಕ ಸಂಘಗಳ ನೂರಾರು ಮಂದಿ ಸದಸ್ಯರು ತಾ 14 ರಂದು ಬಂಟ್ವಾಳ ಬಿ. ಸಿ. ರೋಡಿನಲ್ಲಿ ಬೃಹತ್ ಮತ ಪ್ರದರ್ಶನ ನಡೆಸಿ ಮಂಗಳೂರಿನಲ್ಲಿ ಲೇಬರ್ ಕೋರ್ಟ್ ಸ್ಥಾಪನೆ- ಕನಿಷ್ಠ ವೇತನ ಮಂಜೂರಾತಿ ಮೊದಲಾದ ಬೇಡಿಕೆಗಳ ಕುರಿತು ತಾಲ್ಲೂಕು ತಹಸೀಲ್ದಾರರ ಮುಖಾಂತರ ಮುಖ್ಯಮಂತ್ರಿಯವರಿಗೆ ಮನವಿ ಸಲ್ಲಿಸಿದರು.

ಆ ನಂತರ ನೆರೆದ ಸಭೆಯನ್ನುದ್ದೇಶಿಸಿ ಸಿ. ಐ. ಟಿ. ಯು. ವಿನ ಮುಂದಾಳು ಕೆ. ಆರ್. ಶ್ರೀಯಾನ್, ಶ್ರೀ ಬಿ. ವಾಸುಗಟ್ಟಿ, ಮೊದಲಾದವರು ಮಾತನಾಡಿದರು.

ಹರಿಹರ-ದಾವಣಗೆರೆ

ಸಿ. ಐ. ಟಿ ಯು ಕರೆಯ ಮೇರೆಗೆ ಕಾರ್ಮಿಕರ ಬೇಡಿಕೆ ದಿನಾಚರಣೆಯ ಅಂಗವಾಗಿ ಮಾರ್ಚ್ 14 ರಂದು ಹರಿಹರದಿಂದ ಐದು ನೂರಕ್ಕೂ ಮೇಲ್ಪಟ್ಟು ಕಾರ್ಮಿಕರು ದಾವಣಗೆರೆಯಲ್ಲಿರುವ ಲೇಬರ್ ಆಫೀಸಿಗೆ ಘೆರಾವೋ ಮಾಡಿದರು. ದಾವಣಗೆರೆಯ ನೂರಾರು ಕಾರ್ಮಿಕರೂ ಇದರಲ್ಲಿ ಸೇರಿಕೊಂಡು ಸಿ. ಐ. ಟಿ. ಯು. ಘೋಷಣೆ ಮಾಡುತ್ತ ನಗರದಲ್ಲಿ ಸುತ್ತಾಡಿ, ಮತ ಪ್ರದರ್ಶನ ಮೂಲಕ ಲೇಬರ್ ಆಫೀಸಿನ ಕೆಲಸವನ್ನು ಸ್ಥಗಿತಗೊಳಿಸಿದರು. ಹರಿಹರ ಕಿರ್ಲೋಸ್ಕರ್, ಫಾಲಿ ಫೈಬರ್ ಕಾರ್ಮಿಕರು ದಾವಣಗೆರೆಯಲ್ಲಿ ನಡೆಸಿದ ಈ ಕಾರ್ಯಕ್ರಮ ದಾವಣಗೆರೆಯ ಕಾರ್ಮಿಕರಲ್ಲೂ ಹೊಸ ಚೈತನ್ಯ ತುಂಬಲು ಸಹಾಯಕವಾಗಿದೆ.

ಮೈಸೂರು, ಗುಲ್ಬರ್ಗಾ, ಕುಣಿಗಲ್ ದಾಂಡೇಲಿ ಧಾರವಾಡ, ಬಾಗಲಕೋಟೆ, ಮಡಿಕೇರಿ, ಪುತ್ತೂರು ಮುಂತಾದ ಕಡೆಗಳಲ್ಲಿ ಬೇಡಿಕೆ ದಿನಾಚರಣೆ ನಡೆದಿರುವುದಾಗಿ ತಿಳಿದುಬಂದಿದೆ.

ಎ. ಕೆ. ಜಿ. ಸ್ಮರಣ ದಿನ ಆಚರಣೆ

ಮಾರ್ಚ್ 22 ರಂದು ಎ. ಕೆ. ಗೋಪಾಲನ್ ರವರ 7 ನೆಯ ವರ್ಷದ ಸ್ಮರಣ ದಿನವನ್ನು ಬೆಂಗಳೂರಿನಲ್ಲಿ ಆಚರಿಸಲಾಯಿತು. ಯಶವಂತಪುರದ ಎ. ಕೆ. ಗೋಪಾಲನ್ ಸ್ಮಾರಕ ಗ್ರಂಥಾಲಯ ಮತ್ತು ಉಚಿತ ವಾಚನಾಲಯದ ಆಶ್ರಯದಲ್ಲಿ "ಎಡ ಮತ್ತು ಪ್ರಜಾಪ್ರಭುತ್ವ ಐಕ್ಯತೆಯ ಪರಿಕಲ್ಪನೆ ಮತ್ತು ಎ.ಕೆ. ಗೋಪಾಲನ್" ಎಂಬ ವಿಶಯದ ಕುರಿತು ಕಬ್ಬನ್ ಪಾರ್ಕಿನ ಎನ್. ಜಿ. ಓ. ಸಭಾಂಗಣದಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ಬೆಂಗಳೂರಿನ ನ್ಯಾಶನಲ್ ಕಾಲೇಜಿನ ಅಧ್ಯಾಪಕರಾದ ಡಾ|| ಜಿ. ರಾಮಕೃಷ್ಣ, ಸಿ.ಪಿ.ಐ.ನ ಶಾಸಕರಾದ ಕಾ. ಎಂ ಎಸ್. ಕೃಷ್ಣನ್ ಸಿ.ಪಿ.ಐ. (ಎಂ) ರಾಜ್ಯ ಸೆಕ್ರೆಟೇರಿಯೇಟ್ ಸದಸ್ಯ ಕಾ. ವಿ. ಜೆ. ಕೆ. ನಾಯರ್ ಅವರು ಭಾಗ ವಹಿಸಿದ್ದರು. ಸಿ.ಪಿ.ಐ. (ಎಂ) ಶಾಸಕ ಕಾ. ಎ. ವಿ. ಅಪ್ಪಾಸ್ವಾಮಿ ರೆಡ್ಡಿ ಅವರು ಅಧ್ಯಕ್ಷತೆ ವಹಿಸಿದ್ದರು.

ಕಾರ್ಯಕ್ರಮದ ಕೊನೆಯಲ್ಲಿ ಸೋವಿಯತ್ ಚಲನ ಚಿತ್ರಗಳನ್ನು ಪ್ರದರ್ಶಿಸಲಾಯಿತು.

Printed & Publishedby P. Ramachandra Raoby him on behalf of the Communist Pary of India (Marxist) Karnataka State Committee, K. V. Temple Street, Sultanpet, Bangalore-560053. Editorial and managerial office, L-56, K V. Temple Street, Sultanpet. B-53. Phone : 24154
Editor : P. Ramachandra Rao
Managing Editor : N. K. Upadhyaya